Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

**( ವಿಶೇಷ ಸಂಚಿಕೆ )**

ಠ

**भाग IX अनुभाग 1**

**PART IX SECTION 1**

**ಭಾಗ IX ವಿಭಾಗ 1**

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. १ | नई दिल्ली, शुक्रवार, एप्रील ६, २०१२ | वैशाक १७, १९३४ (शका) | खंड. ४८ |
| No. 1 | New Delhi, Friday, April 6, 2012 | Vaishakha 17, 1934 (Saka) | Vol. 48 |
| ಸಂ. ೧ | ನವ ದೆಹಲಿ, ಶುಕ್ರವಾರ, ಏಪ್ರಿಲ್ ೬, ೨೦೧೨ | ವೈಶಾಖ ೧೭, ೧೯೩೪ (ಶಕ) | ಸಂಪುಟ. ೪೮ |


**Ministry of Law and Justice**

(Legislative Department)

New Delhi, 6th April, 2012

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 6ನೇ ಏಪ್ರಿಲ್, 2012**

The Translation in Kannada of the following Acts, namely :- (1) The Energy Conservation Act, 2001 (2) The Haj Committee Act, 2002 (3) The Multi-State Co-operative Societies Act, 2002 (4) The Central Educational Institutions (Reservation in Admission) Act, 2006 (5) The Government Securities Act, 2006 (6) The Science and Engineering Research Board Act, 2008 (7) The Unorganised Workers Social Security Act, 2008 (8) The National Investigation Agency Act, 2008 and (9) The Right of Children to Free and Compulsory Education Act, 2009 - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮ ಎಂದರೆ:- (1) ಇಂಧನ ಶಕ್ತಿ ಸಂರಕ್ಷಣಾ ಅಧಿನಿಯಮ, 2001 (2) ಹಜ್ ಸಮಿತಿ ಅಧಿನಿಯಮ, 2002 (3) ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002 (4) ಕೇಂದ್ರೀಯ ಶಿಕ್ಷಣ ಸಂಸ್ಥೆಗಳ (ಪ್ರವೇಶದಲ್ಲಿ ಮೀಸಲಾತಿ) ಅಧಿನಿಯಮ, 2006 (5) ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006 (6) ವಿಜ್ಞಾನ ಮತ್ತು ಇಂಜಿನಿಯರಿಂಗ್ ಸಂಶೋಧನಾ ಮಂಡಳಿ ಅಧಿನಿಯಮ, 2008 (7) ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಅಧಿನಿಯಮ, 2008 (8) ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008 ಮತ್ತು (9) ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 - ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006

The Government Securities Act, 2006

(2006ರ ಅಧಿನಿಯಮ ಸಂಖ್ಯೆ 38)

[30ನೇ ಆಗಸ್ಟ್, 2006]

ಸರ್ಕಾರಿ ಭದ್ರತಾ ಪತ್ರಗಳಿಗೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅವುಗಳ ವ್ಯವಸ್ಥಾಪನೆಗೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಸರ್ಕಾರಿ ಭದ್ರತಾ ಪತ್ರಗಳಿಗೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅವುಗಳ ವ್ಯವಸ್ಥಾಪನೆಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಮತ್ತು ಸಂವಿಧಾನದ 249 ಮತ್ತು 250ನೇ ಅನುಚ್ಛೇದಗಳಲ್ಲಿ ಉಪಬಂಧಿಸಿರುವಂತೆ ಹೊರತು, ಮೇಲೆ ಹೇಳಿದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯಗಳಿಗಾಗಿ ಕಾನೂನುಗಳನ್ನು ರಚಿಸುವ ಅಧಿಕಾರ ಸಂಸತ್ತಿಗೆ ಇಲ್ಲದಿರುವುದರಿಂದ;

ಮತ್ತು ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಅನುಸಾರವಾಗಿ, ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನ ಮಂಡಲವನ್ನು ಹೊರತುಪಡಿಸಿ, ಎಲ್ಲಾ ರಾಜ್ಯಗಳ ವಿಧಾನ ಮಂಡಲಗಳ ಸದನಗಳು, ಮೇಲೆ ಹೇಳಿದ ವಿಷಯಗಳನ್ನು ಆ ರಾಜ್ಯಗಳಲ್ಲಿ ಕಾನೂನಿನ ಮೂಲಕ ಸಂಸತ್ತು ವಿನಿಯಮಿಸತಕ್ಕದ್ದೆಂದು ನಿರ್ಣಯಗಳನ್ನು ಅಂಗೀಕರಿಸಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತೇಳನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:

**1. ಚಿಕ್ಕ ಹೆಸರು, ಅನ್ವಯ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006 ಎಂದು ಕರೆಯತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸೃಜಿಸಿದ ಮತ್ತು ನೀಡಿದ ಸರ್ಕಾರಿ ಭದ್ರತಾ ಪತ್ರಗಳಿಗೆ ಈ ಅಧಿನಿಯಮವು ಅನ್ವಯವಾಗುತ್ತದೆ.

(3) ಇದು, ಮೊದಲಿಗೆ, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಎಲ್ಲಾ ರಾಜ್ಯಗಳಿಗೆ ಮತ್ತು ಎಲ್ಲ ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಅನ್ವಯವಾಗುತ್ತದೆ ಮತ್ತು ಇದು, ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಆ ಬಗ್ಗೆ ಅಂಗೀಕರಿಸಿದ ನಿರ್ಣಯದ ಮೂಲಕ ಈ ಅಧಿನಿಯಮವನ್ನು ಅಳವಡಿಸಿಕೊಂಡಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೂ ಕೂಡ ಅನ್ವಯವಾಗತಕ್ಕದ್ದು.

(4) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಎಲ್ಲಾ ರಾಜ್ಯಗಳಲ್ಲಿ ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳಲ್ಲಿ ಮತ್ತು ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಈ ಅಧಿನಿಯಮವನ್ನು ಅಳವಡಿಸಿಕೊಂಡಲ್ಲಿ, ಹಾಗೆ ಅಳವಡಿಸಿಕೊಂಡ ದಿನಾಂಕದಂದು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಗೆ

ಬರತಕ್ಕದ್ದು ಮತ್ತು ಯಾವುದೇ ರಾಜ್ಯಕ್ಕೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದ ಪ್ರಾರಂಭಕ್ಕೆ ಈ ಅಧಿನಿಯಮದಲ್ಲಿ ಮಾಡಿರುವ ಯಾವುದೇ ಉಲ್ಲೇಖ, ಎಂದರೆ, ಅಂಥ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಈ ಅಧಿನಿಯಮವು ಯಾವ ದಿನಾಂಕದಂದು ಜಾರಿಗೆ ಬರುವುದೋ ಆ ದಿನಾಂಕ.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಏಜೆಂಟ್" ಎಂದರೆ, ಭಾರತ ರಿಸರ್ವ್‌ಬ್ಯಾಂಕ್ ಅಧಿನಿಯಮ, 1934ರ 2ನೇ ಪ್ರಕರಣದ (ಇ) ಖಂಡದ ಅರ್ಥವ್ಯಾಪ್ತಿಯೊಳಗೆ ಒಂದು ಅನುಸೂಚಿತ ಬ್ಯಾಂಕ್ ಅಥವಾ ಹಾಗೆಂದು ನಿರ್ದಿಷ್ಟಪಡಿಸಿದ ಯಾರೇ ಇತರ ವ್ಯಕ್ತಿ;

(ಬಿ) "ಬ್ಯಾಂಕ್" ಎಂದರೆ, ಭಾರತ ರಿಸರ್ವ್‌ಬ್ಯಾಂಕ್ ಅಧಿನಿಯಮ, 1934ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತ ರಿಸರ್ವ್ ಬ್ಯಾಂಕ್;

(ಸಿ) "ಬಾಂಡ್ ಲೆಡ್ಜರ್ ಖಾತೆ" ಎಂದರೆ, ಧಾರಕನ ಲೆಕ್ಕದಲ್ಲಿ ಯಾವ ಬ್ಯಾಂಕಿನಲ್ಲಿ ಅಥವಾ ಏಜೆಂಟನ ಬಳಿ ಸರ್ಕಾರಿ ಭದ್ರತಾ ಪತ್ರಗಳು ಅಮೂರ್ತ ರೂಪದಲ್ಲಿ ಇರುತ್ತವೋ ಆ ಬ್ಯಾಂಕಿನಲ್ಲಿ ಅಥವಾ ಏಜೆಂಟನ ಬಳಿ ಇರುವ ಖಾತೆ;

(ಡಿ) "ಗ್ರಾಹಕರ ಪೂರಕ ಸಾಮಾನ್ಯ ಲೆಡ್ಜರ್ ಖಾತೆ" ಎಂದರೆ, ಒಬ್ಬ ಏಜೆಂಟನು ತನ್ನ ಗ್ರಾಹಕರ ಪರವಾಗಿ ಬ್ಯಾಂಕ್‌ನಲ್ಲಿ ತೆರೆದಿರುವ ಮತ್ತು ನಿರ್ವಹಿಸುತ್ತಿರುವ ಪೂರಕ ಸಾಮಾನ್ಯ ಲೆಡ್ಜರ್ ಖಾತೆ;

(ಇ) ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ "ಸರ್ಕಾರ" ಎಂದರೆ, ಭದ್ರತಾ ಪತ್ರವನ್ನು ನೀಡುವ ಕೇಂದ್ರ ಅಥವಾ ರಾಜ್ಯ ಸರ್ಕಾರ;

(ಎಫ್) "ಸರ್ಕಾರಿ ಭದ್ರತಾ ಪತ್ರ" ಎಂದರೆ, ಸಾರ್ವಜನಿಕ ಸಾಲವನ್ನು ಎತ್ತುವ ಉದ್ದೇಶಕ್ಕಾಗಿ ಅಥವಾ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಬಹುದಾದಂಥ ಯಾವುದೇ ಇತರ ಉದ್ದೇಶಕ್ಕಾಗಿ ಸರ್ಕಾರವು ಸೃಜಿಸಿದ ಮತ್ತು ನೀಡಿದ ಮತ್ತು 3ನೇ ಪ್ರಕರಣದಲ್ಲಿ ಹೇಳಿದ ನಮೂನೆಗಳಲ್ಲಿ ಯಾವುದೇ ಒಂದು ನಮೂನೆಯಲ್ಲಿರುವ ಭದ್ರತಾ ಪತ್ರ;

(ಜಿ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) "ಪ್ರಾಮಿಸರಿ ನೋಟು" ಎಂಬುದು ಖಜಾನೆ ಬಿಲ್ಲನ್ನು ಒಳಗೊಳ್ಳುತ್ತದೆ;

(ಐ) "ನಿರ್ದಿಷ್ಟಪಡಿಸಿದ" ಎಂದರೆ, ಬ್ಯಾಂಕು ರಾಜಪತ್ರದಲ್ಲಿ ನಿರ್ದಿಷ್ಟಪಡಿಸಿರುವುದು.

**3. ಸರ್ಕಾರಿ ಭದ್ರತಾ ಪತ್ರಗಳ ನಮೂನೆಗಳು.**– ಸರ್ಕಾರಿ ಭದ್ರತಾ ಪತ್ರವು, ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ನಿಯಮಿಸಬಹುದಾದಂಥ ನಮೂನೆಗಳಲ್ಲಿ ಅಥವಾ ಈ ಕೆಳಕಂಡ ನಮೂನೆಗಳ ಪೈಕಿ ಯಾವುದೇ ಒಂದು ನಮೂನೆಯಲ್ಲಿ ಇರಬಹುದು, ಎಂದರೆ:–

(i) ಕೆಲವು ವ್ಯಕ್ತಿಗಳಿಗೆ ಅಥವಾ ಅವರು ಸೂಚಿಸಿದವರಿಗೆ ಸಂದಾಯವಾಗತಕ್ಕ ಸರ್ಕಾರಿ ಪ್ರಾಮಿಸರಿ ನೋಟು; ಅಥವಾ

(ii) ವಾಹಕನಿಗೆ ಸಂದಾಯವಾಗತಕ್ಕ ವಾಹಕ ಬಾಂಡ್; ಅಥವಾ

(iii) ಸ್ಟಾಕ್; ಅಥವಾ

(iv) ಬಾಂಡ್ ಲೆಡ್ಜರ್ ಖಾತೆಯಲ್ಲಿ ಹೊಂದಿರುವ ಬಾಂಡ್.

**ವಿವರಣೆ:**- ಈ ಪ್ರಕರಣದ ಉದ್ದೇಶಕ್ಕಾಗಿ, "ಸ್ಟಾಕ್" ಎಂದರೆ:-

(i) ಸ್ಟಾಕ್ ಪ್ರಮಾಣಪತ್ರವನ್ನು ಯಾವ ಬ್ಯಾಂಕಿಗೆ ನೀಡಲಾಗಿದೆಯೋ ಆ ಬ್ಯಾಂಕಿನ ಪುಸ್ತಕಗಳಲ್ಲಿ ನೋಂದಾಯಿತವಾದ; ಅಥವಾ

(ii) ಬ್ಯಾಂಕಿನ ಪುಸ್ತಕಗಳಲ್ಲಿ ನಿರ್ವಹಿಸಿರುವ ಮತ್ತು ಬ್ಯಾಂಕಿನ ಪುಸ್ತಕಗಳಲ್ಲಿ ನೋಂದಾಯಿಸುವ ಮೂಲಕ ವರ್ಗಾವಣೆ ಮಾಡಬಹುದಾದ ಗ್ರಾಹಕರ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯೂ ಸೇರಿದಂತೆ, ಪೂರಕ ಸಾಮಾನ್ಯ ಲೆಡ್ಜರ್ ಖಾತೆಯಲ್ಲಿ ವಾಹಕನ ಲೆಕ್ಕದಲ್ಲಿ ಹೊಂದಿರುವ

– ಒಂದು ಸರ್ಕಾರಿ ಭದ್ರತಾ ಪತ್ರ.

**4. ಪೂರಕ ಸಾಮಾನ್ಯ ಲೆಡ್ಜರ್ ಖಾತೆ.**- (1) ಗ್ರಾಹಕರ ಪೂರಕ ಸಾಮಾನ್ಯ ಲೆಡ್ಜರ್ ಖಾತೆ ಮತ್ತು ಬಾಂಡ್ ಲೆಡ್ಜರ್ ಖಾತೆಯೂ ಸೇರಿದಂತೆ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯನ್ನು, ಬ್ಯಾಂಕು, ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಹಾಗೂ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ತೆರೆಯಬಹುದು ಮತ್ತು ನಿರ್ವಹಿಸಬಹುದು.

(2) ಬೇನಾಮಿ ವ್ಯವಹಾರಗಳ (ನಿಷೇಧ) ಅಧಿನಿಯಮ, 1988 (1988ರ 45) ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರಿ ಭದ್ರತಾ ಪತ್ರಗಳನ್ನು (1)ನೇ ಉಪಪ್ರಕರಣದ ಮೇರೆಗಿನ ಗ್ರಾಹಕರ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯಲ್ಲಿ ಗ್ರಾಹಕನ ಪರವಾಗಿ ಹೊಂದಿರಬಹುದು ಮತ್ತು ಅಂಥ ಖಾತೆಯ ಧಾರಕನನ್ನು ಆ ಖಾತೆಯಲ್ಲಿ ಹೊಂದಿದ ಭದ್ರತಾ ಪತ್ರಗಳ ಧಾರಕನೆಂದು ಭಾವಿಸತಕ್ಕದ್ದು:

ಪರಂತು, ಸರ್ಕಾರಿ ಭದ್ರತಾ ಪತ್ರದ ಪ್ರಯೋಜನಕಾರಿ ಒಡೆಯನಾಗಿ ಗ್ರಾಹಕನು ಧಾರಕನಿಂದ ಎಲ್ಲಾ ಪ್ರಯೋಜನಗಳನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಗ್ರಾಹಕನು ಪೂರಕ ಸಾಮಾನ್ಯ ಲೆಡ್ಜರ್ ಖಾತೆಯಲ್ಲಿ ಹೊಂದಿರುವ ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ ಎಲ್ಲಾ ಹೊಣೆಗಾರಿಕೆಗಳಿಗೆ ಒಳಪಟ್ಟಿರತಕ್ಕದ್ದು.

(3) ಗ್ರಾಹಕನ ಪೂರಕ ಸಾಮಾನ್ಯ ಲೆಡ್ಜರ್ ಖಾತೆದಾರನು ಗ್ರಾಹಕನ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಾಗಿ ನಿರ್ದಿಷ್ಟಪಡಿಸಬಹುದಾದಂಥ ದಾಖಲೆಗಳನ್ನು ಇಡತಕ್ಕದ್ದು ಮತ್ತು ಅಂಥ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳತಕ್ಕದ್ದು.

**5. ಸರ್ಕಾರಿ ಭದ್ರತಾ ಪತ್ರಗಳ ವರ್ಗಾವಣೆ.**- (1) ಭದ್ರತಾ ಪತ್ರಕ್ಕೆ ಸಂಪೂರ್ಣ ಸ್ವಾಮ್ಯ ಇದೆ ಎಂಬುದು ತಾತ್ಪರ್ಯವಾಗದಿದ್ದರೆ, ಸರ್ಕಾರಿ ಭದ್ರತಾ ಪತ್ರದ ಯಾವುದೇ ವರ್ಗಾವಣೆಯು ಸಿಂಧುವಾಗತಕ್ಕದ್ದಲ್ಲ.

(2) ಸರ್ಕಾರಿ ಭದ್ರತಾ ಪತ್ರಗಳ ವರ್ಗಾವಣೆಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮಾಡತಕ್ಕದ್ದು.

(3) ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದ ಯಾವುದೇ ದಸ್ತಾವೇಜನ್ನು ಅಥವಾ ಸರ್ಕಾರವು ನೀಡಿದ ಪ್ರಾಮಿಸರಿ ನೋಟಿನ ಮೇಲೆ ಯಾವುದೇ ಹಿಂಬರಹವನ್ನು, ಯಾವುದೇ ಕಾರಣಕ್ಕಾಗಿ ಬರೆಯಲು ಅಸಮರ್ಥನಾಗಿರುವ ವ್ಯಕ್ತಿಯು ಕೋರಿದಾಗ ನಿಯಮಿಸಬಹುದಾದಂಥ ರೀತಿಯಲ್ಲಿ ಅವನ ಪರವಾಗಿ ಬರೆದುಕೊಡತಕ್ಕದ್ದು.

(4) ಈ ಪ್ರಕರಣದಲ್ಲಿರುವುದು ಯಾವುದೂ, ಈ ಅಧಿನಿಯಮದ ಮೇರೆಗೆ ಬ್ಯಾಂಕ್ ಮಾಡಿದ ಯಾವುದೇ ಆದೇಶಕ್ಕೆ ಅಥವಾ ಬ್ಯಾಂಕಿಗೆ ಸಂಬಂಧಿಸಿದಂತೆ ನ್ಯಾಯಾಲಯವು ಮಾಡಿದ ಯಾವುದೇ ಆದೇಶಕ್ಕೆ ಬಾಧಕವುಂಟು ಮಾಡತಕ್ಕದ್ದಲ್ಲ.

**6. ಸರ್ಕಾರಿ ಪದಗಳ ಧಾರಕರು ಸರ್ಕಾರಿ ಭದ್ರತಾ ಪತ್ರಗಳನ್ನು ಹೊಂದಿರುವುದು.–** (1) ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಈ ಉಪ ಪ್ರಕರಣವು ಯಾವ ಸರ್ಕಾರಿ ಪದಕ್ಕೆ ಅನ್ವಯಿಸುತ್ತದೆಂದು ಘೋಷಿಸುವುದೋ ಆ ಯಾವುದೇ ಸರ್ಕಾರಿ ಪದದ ಸಂದರ್ಭದಲ್ಲಿ, ಸರ್ಕಾರಿ ಭದ್ರತಾ ಪತ್ರವನ್ನು ಆ ಪದದ ಹೆಸರಿನಲ್ಲಿ ಹೊಂದಿರಬಹುದು.

(2) ಸರ್ಕಾರಿ ಭದ್ರತಾ ಪತ್ರವನ್ನು ಹಾಗೆ ಹೊಂದಿರುವಾಗ, ಅದು, ಯಾವುದೇ ಅಥವಾ ಹೆಚ್ಚಿನ ಹಿಂಬರಹವಿಲ್ಲದೆ ಅಥವಾ ವರ್ಗಾವಣೆ ಪತ್ರವಿಲ್ಲದೆ, ಪದವನ್ನು ಧಾರಣ ಮಾಡಿದ್ದ ಪ್ರತಿಯೊಬ್ಬ ಧಾರಕನಿಂದ ಪದವನ್ನು ತರುವಾಯ ಧಾರಣ ಮಾಡಿದ ಧಾರಕನಿಗೆ ಆ ತರುವಾಯದ ಧಾರಕನು ಪದದ ಪ್ರಭಾರವನ್ನು ವಹಿಸಿಕೊಂಡ ದಿನಾಂಕದಂದು ಮತ್ತು ದಿನಾಂಕದಿಂದ ವರ್ಗಾವಣೆಯಾಗಿದೆಯೆಂದು ಭಾವಿಸತಕ್ಕದ್ದು.

(3) ಪದದ ಧಾರಕನು, ಸರ್ಕಾರಿ ಭದ್ರತಾ ಪತ್ರವನ್ನು ಹಾಗೆ ಹೊಂದಿರುವ ಪದದಲ್ಲಿ ತನ್ನ ಉತ್ತರಾಧಿಕಾರಿಯಲ್ಲದ ಪಕ್ಷಕಾರನಿಗೆ ವರ್ಗಾವಣೆ ಮಾಡುವಾಗ, 5ನೇ ಪ್ರಕರಣದಲ್ಲಿ ನಿರೂಪಿಸಿದ ರೀತಿಯಲ್ಲಿ ಪದದ ಧಾರಕನ ಸಹಿಯೊಂದಿಗೆ ಮತ್ತು ಪದದ ಹೆಸರಿನಿಂದ ವರ್ಗಾವಣೆ ಮಾಡತಕ್ಕದ್ದು.

(4) ಪದದ ಧಾರಕನು ಯಾವುದೇ ಕಾರಣಕ್ಕಾಗಿ ತನ್ನ ಪದದಿಂದ ಹದಿನೈದು ದಿನಗಳಿಗೂ ಹೆಚ್ಚು ಕಾಲ ತಾತ್ಕಾಲಿಕವಾಗಿ ಗೈರು ಹಾಜರಾಗಿದ್ದಲ್ಲಿ, ಅಂಥ ಗೈರುಹಾಜರಿಯ ಅವಧಿಯಲ್ಲಿ ಈ ಪದದ ಪ್ರಭಾರದಲ್ಲಿ ಇರುವಂಥ ಇತರ ವ್ಯಕ್ತಿಯನ್ನು ಸರ್ಕಾರಿ ಭದ್ರತಾ ಪತ್ರಗಳನ್ನು ವರ್ಗಾವಣೆ ಮಾಡಲು ಲಿಖಿತದಲ್ಲಿ ಅಧಿಕೃತಗೊಳಿಸಬಹುದು.

(5) ಈ ಪ್ರಕರಣವು, ಒಬ್ಬನೇ ಧಾರಕನಿರುವ ಪದಕ್ಕೆ ಅನ್ವಯಿಸುವಂತೆಯೇ, ಇಬ್ಬರು ಅಥವಾ ಹೆಚ್ಚು ಜಂಟಿ ಧಾರಕರು ಇರುವ ಪದಕ್ಕೂ ಅನ್ವಯವಾಗುತ್ತದೆ.

**7. ಮೃತ ಏಕೈಕ ಧಾರಕನ ಅಥವಾ ಜಂಟಿ ಧಾರಕರ ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯಕ್ಕೆ ಮನ್ನಣೆ.–** (1) (2)ನೆಯ ಮತ್ತು (3)ನೆಯ ಉಪ ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಸರ್ಕಾರಿ ಭದ್ರತಾ ಪತ್ರದ ಏಕೈಕ ಧಾರಕನು ಮೃತನಾದಾಗ ಅಥವಾ ಎಲ್ಲಾ ಜಂಟಿ ಧಾರಕರು ಮೃತರಾದಾಗ, ನಾಮ ನಿರ್ದೇಶನವು ಚಾಲ್ತಿಯಲ್ಲಿಲ್ಲದಿದ್ದರೆ, ಸಂದರ್ಭಾನುಸಾರ, ಮೃತ ಏಕೈಕ ಧಾರಕನ ಅಥವಾ ಎಲ್ಲಾ ಮೃತ ಜಂಟಿ ಧಾರಕರ ಕಾರ್ಯನಿರ್ವಾಹಕರು ಅಥವಾ ಆಡಳಿತಗಾರರು ಅಥವಾ ಭಾರತ ಉತ್ತರಾಧಿಕಾರ ಅಧಿನಿಯಮ, 1925ರ ಭಾಗ X ರ ಮೇರೆಗೆ ನೀಡಿದ ಉತ್ತರಾಧಿಕಾರ ಪ್ರಮಾಣಪತ್ರದ ಧಾರಕನು ಸರ್ಕಾರಿ ಭದ್ರತಾ ಪತ್ರದ ಯಾವುದೇ ಸ್ವಾಮ್ಯವನ್ನು ಹೊಂದಿರುವನೆಂದು ಬ್ಯಾಂಕು ಮನ್ನಣೆ ನೀಡಬಹುದಾದ ಏಕ ಮಾತ್ರ ವ್ಯಕ್ತಿಯಾಗಿರತಕ್ಕದ್ದು.

(2) ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾರೇ ವ್ಯಕ್ತಿಯು ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯವನ್ನು ಹೊಂದಿರುವನೆಂದು ಘೋಷಿಸಿ ಅಥವಾ ಭದ್ರತಾ ಪತ್ರವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ರಿಸೀವರ್‌ನನ್ನು ನೇಮಿಸಿ ಸಕ್ಷಮ ನ್ಯಾಯಾಲಯವು ಹೊರಡಿಸಿದ ಡಿಕ್ರಿಯ, ಆದೇಶದ ಅಥವಾ ನೀಡಿದ ನಿರ್ದೇಶನದ ಆಧಾರದ ಮೇಲೆ ಅಥವಾ ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯವನ್ನು ಯಾರೇ ಅಂಥ ವ್ಯಕ್ತಿಗೆ ಪ್ರದಾನ ಮಾಡುವುದಕ್ಕೆ ಯಾವುದೇ ಶಾಸನದ ಮೇರೆಗೆ ಅಧಿಕಾರ ಪಡೆದಿರಬಹುದಾದ ಯಾವುದೇ ಇತರ ಪ್ರಾಧಿಕಾರವು ನೀಡಿದ ಪ್ರಮಾಣಪತ್ರದ ಅಥವಾ ಹೊರಡಿಸಿದ ಆದೇಶದ ಆಧಾರದ ಮೇಲೆ ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯವನ್ನು ಆ ವ್ಯಕ್ತಿಯು ಹೊಂದಿರುವನೆಂದು ಬ್ಯಾಂಕು ಮನ್ನಣೆ ನೀಡುವುದನ್ನು ಪ್ರತಿಷೇಧಿಸತಕ್ಕದ್ದಲ್ಲ.

(3) ಈ ಪ್ರಕರಣದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸಂದರ್ಭಾನುಸಾರ ಮೃತ ಏಕೈಕ ಧಾರಕನು ಅಥವಾ ಮೃತ ಜಂಟಿ ಧಾರಕರು ಹೊಂದಿದ್ದ ಸರ್ಕಾರಿ ಭದ್ರತಾ ಪತ್ರದ ವಾಸ್ತವಿಕ ಮೌಲ್ಯವು ಒಂದು ಲಕ್ಷ ರೂಪಾಯಿಗಳ ಮೊತ್ತವನ್ನು ಅಥವಾ ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದಾದಂತೆ ಒಂದು ಕೋಟಿ ರೂಪಾಯಿಗಳನ್ನು ಮೀರದಂಥ ಹೆಚ್ಚಿನ ಮೊತ್ತವನ್ನು ಮೀರದಿದ್ದಲ್ಲಿ, ಬ್ಯಾಂಕು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಮೃತ ಏಕೈಕ ಧಾರಕನ ಅಥವಾ ಮೃತ ಜಂಟಿ ಧಾರಕರ ಅಂಥ ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯ ಹೊಂದಿರುವನೆಂದು ಒಬ್ಬ ವ್ಯಕ್ತಿಗೆ ಮನ್ನಣೆ ನೀಡಬಹುದು.

**8. ಜಂಟಿ ಧಾರಕರಲ್ಲಿ ಅಥವಾ ಬೇರೆಬೇರೆ ಸ್ವೀಕರ್ತರಲ್ಲಿ ಬದುಕುಳಿದವರ ಹಕ್ಕು.–** ಭಾರತ ಕರಾರು ಅಧಿನಿಯಮ, 1872ರ 45ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಮತ್ತು 7ನೇ ಮತ್ತು 10ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು,–

(ಎ) ಸರ್ಕಾರಿ ಭದ್ರತಾ ಪತ್ರವನ್ನು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಜಂಟಿಯಾಗಿ ಹೊಂದಿರುವಾಗ ಮತ್ತು ಇಬ್ಬರಲ್ಲಿ ಒಬ್ಬರು ಅಥವಾ ಅವರಲ್ಲಿ ಯಾರೇ ಮೃತರಾದಾಗ, ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯವು, ಆ ವ್ಯಕ್ತಿಗಳ ಪೈಕಿ ಬದುಕುಳಿದವನಲ್ಲಿ ಅಥವಾ ಬದುಕುಳಿದವರಲ್ಲಿ ನಿಹಿತವಾಗತಕ್ಕದ್ದು.

(ಬಿ) ಸರ್ಕಾರಿ ಭದ್ರತಾ ಪತ್ರದ ಹಣವು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ಸಂದಾಯವಾಗಬೇಕಾಗಿರುವಾಗ ಮತ್ತು ಇಬ್ಬರಲ್ಲಿ ಒಬ್ಬರು ಅಥವಾ ಅವರಲ್ಲಿ ಯಾರೇ ಮೃತರಾದಾಗ, ಆ ಭದ್ರತಾ ಪತ್ರದ ಹಣವು, ಆ ವ್ಯಕ್ತಿಗಳ ಪೈಕಿ ಬದುಕುಳಿದವನಿಗೆ ಅಥವಾ ಬದುಕುಳಿದವರಿಗೆ ಅಥವಾ ಮೃತನ ಪ್ರತಿನಿಧಿಗೆ ಅಥವಾ ಅವರಲ್ಲಿ ಯಾರೇ ಒಬ್ಬನಿಗೆ ಸಂದಾಯವಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಸಂದರ್ಭಾನುಸಾರ, ಸರ್ಕಾರಿ ಭದ್ರತಾ ಪತ್ರದ ಮೃತ ಜಂಟಿಧಾರಕನ ಅಥವಾ ಮೃತ ಧಾರಕರ ಯಾರೇ ಪ್ರತಿನಿಧಿಯು ಅಥವಾ ಸರ್ಕಾರಿ ಭದ್ರತಾ ಪತ್ರದ ಬದುಕುಳಿದಿರುವ ಜಂಟಿ ಧಾರಕನು ಅಥವಾ ಧಾರಕರು, ಯಾವ ಸರ್ಕಾರಿ ಭದ್ರತಾ ಪತ್ರಕ್ಕೆ ಈ ಪ್ರಕರಣವು ಅನ್ವಯವಾಗುತ್ತದೋ ಆ ಭದ್ರತಾ ಪತ್ರದ ಮೇರೆಗೆ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಬದುಕುಳಿದಿರುವವನ ಅಥವಾ ಬದುಕುಳಿದಿರುವವರ ಅಥವಾ ಪ್ರತಿನಿಧಿಗಳ ವಿರುದ್ಧ ಯಾವ ಕ್ಲೇಮನ್ನು ಹೊಂದಿರಬಹುದಾಗಿದೆಯೋ ಆ ಯಾವುದೇ ಕ್ಲೇಮಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ, ಕಂಪನಿಗಳ ಅಧಿನಿಯಮ, 1956 ಅಥವಾ ಸಹಕಾರ ಸಂಘಗಳ ಅಧಿನಿಯಮ, 1912 ಅಥವಾ ವ್ಯಕ್ತಿಗಳ ಸಂಘಗಳನ್ನು ನಿಗಮನಗೊಳಿಸುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯ ಮೇರೆಗೆ ನಿಗಮಿತವಾದ ಅಥವಾ ನಿಗಮಿತವಾಗಿದೆಯೆಂದು ಭಾವಿಸಲಾದ ಒಂದು ನಿಕಾಯವು ಅದು ವಿಸರ್ಜನೆಯಾದಾಗ ಅಂತ್ಯವಾಗಿದೆಯೆಂಬುದಾಗಿ ಭಾವಿಸತಕ್ಕದ್ದು.

9. **ಸರ್ಕಾರಿ ಭದ್ರತಾ ಪತ್ರಗಳ ಧಾರಕರಿಂದ ನಾಮನಿರ್ದೇಶನ.-** (1) (2)ನೇ ಉಪಪ್ರಕರಣದ ಉಪಬಂಧಗಳನ್ನು ಹೊರತುಪಡಿಸಿ, 7ನೇ ಮತ್ತು 8ನೇ ಪ್ರಕರಣಗಳಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ,-

(ಎ) ಪ್ರಾಮಿಸರಿ ನೋಟಿನ ಅಥವಾ ವಾಹಕ ಬಾಂಡಿನ ನಮೂನೆಯದ್ದಲ್ಲದ ಸರ್ಕಾರಿ ಭದ್ರತಾ ಪತ್ರವನ್ನು, ಒಬ್ಬ ವ್ಯಕ್ತಿಯು, ಸಂದರ್ಭಾನುಸಾರ, ತನ್ನ ಹೆಸರಿನಲ್ಲಿ ಅಥವಾ ಯಾವುದೇ ಇತರ ಹೆಸರಿನೊಂದಿಗೆ ಅಥವಾ ಹೆಸರುಗಳೊಂದಿಗೆ ಜಂಟಿಯಾಗಿ ಹೊಂದಿದ್ದಲ್ಲಿ, ಸರ್ಕಾರಿ ಭದ್ರತಾ ಪತ್ರದ ಏಕೈಕ ಧಾರಕನು ಅಥವಾ ಆ ಎಲ್ಲಾ ಜಂಟಿ ಧಾರಕರು ಒಟ್ಟಿಗೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಒಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನು ನಾಮ ನಿರ್ದೇಶನ ಮಾಡಬಹುದು. ಆ ನಾಮ ನಿರ್ದೇಶಿತರು, ಸಂದರ್ಭಾನುಸಾರ ಏಕೈಕ ಧಾರಕನು ಆಥವಾ ಎಲ್ಲ ಜಂಟಿಧಾರಕರು ಮರಣಹೊಂದಿದ ಪಕ್ಷದಲ್ಲಿ, ನಿಯಮಿಸಬಹುದಾದ ರೀತಿಯಲ್ಲಿ ನಾಮನಿರ್ದೇಶನವನ್ನು ವ್ಯತ್ಯಸ್ತಗೊಳಿಸಿದ್ದ ಅಥವಾ ರದ್ದುಪಡಿಸಿದ್ದ ಹೊರತು ಇತರ ಎಲ್ಲ ವ್ಯಕ್ತಿಗಳನ್ನು ಹೊರತುಪಡಿಸಿ ಸರ್ಕಾರಿ ಭದ್ರತಾ ಪತ್ರಕ್ಕೆ ಮತ್ತು ಅದರ ಮೇಲಿನ ಹಣ ಸಂದಾಯಕ್ಕೆ ಹಕ್ಕುಳ್ಳವರಾಗುತ್ತಾರೆ.

(ಬಿ) ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ನಾಮ ನಿರ್ದೇಶನವನ್ನು ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ಹೆಸರಿನಲ್ಲಿ ಮಾಡಿದ್ದರೆ ಮತ್ತು ಆ ಇಬ್ಬರಲ್ಲಿ ಒಬ್ಬರು ಅಥವಾ ಅವರಲ್ಲಿ ಯಾರೇ ಮೃತರಾದಲ್ಲಿ, ಬದುಕುಳಿದಿರುವ ನಾಮ ನಿರ್ದೇಶಿತನು ಅಥವಾ ಸಂದರ್ಭಾನುಸಾರ, ನಾಮ ನಿರ್ದೇಶಿತರು ಸರ್ಕಾರಿ ಭದ್ರತಾ ಪತ್ರಕ್ಕೆ ಮತ್ತು ಅದರ ಮೇಲಿನ ಹಣ ಸಂದಾಯಕ್ಕೆ ಹಕ್ಕುಳ್ಳವರಾಗಿರತಕ್ಕದ್ದು;

(ಸಿ) ನಾಮ ನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ, ಸರ್ಕಾರಿ ಭದ್ರತಾಪತ್ರದ ಏಕೈಕ ಧಾರಕನು ಅಥವಾ ಸಂದರ್ಭಾನುಸಾರ, ಎಲ್ಲಾ ಜಂಟಿ ಧಾರಕರು, ಆ ನಾಮ ನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿರುವ ಅವಧಿಯಲ್ಲಿ, ಸರ್ಕಾರಿ ಭದ್ರತಾ ಪತ್ರದ ಅಂಥ ಧಾರಕನು ಅಥವಾ ಜಂಟಿ ಧಾರಕರು ಮರಣ ಹೊಂದಿದ ಸಂದರ್ಭದಲ್ಲಿ, ಅವರು ಸರ್ಕಾರಿ ಭದ್ರತಾ ಪತ್ರವು ಯಾವ ವ್ಯಕ್ತಿಯಲ್ಲಿ ನಿಹಿತವಾಗಬೇಕು ಎಂದು ಭಾವಿಸುತ್ತಾರೋ ಆ ವ್ಯಕ್ತಿಯನ್ನು ನಿಯಮಿಸಬಹುದಾದ ರೀತಿಯಲ್ಲಿ ನೇಮಕ ಮಾಡುವುದು ಕಾನೂನುಬದ್ಧವಾಗಿರತಕ್ಕದ್ದು;

(ಡಿ) ಏಕೈಕ ಧಾರಕನು ಅಥವಾ ಸಂದರ್ಭಾನುಸಾರ ಜಂಟಿ ಧಾರಕರು ಹೊಂದಿರುವ ಸರ್ಕಾರಿ ಭದ್ರತಾ ಪತ್ರದ ನಾಮ ನಿರ್ದೇಶಿತನ ಅಥವಾ ನಾಮ ನಿರ್ದೇಶಿತರ ಹಕ್ಕನ್ನು ಮತ್ತು ಕ್ಲೇಮನ್ನು ಮಾನ್ಯ ಮಾಡಿದಾಗ ಮತ್ತು ಆ ನಾಮ ನಿರ್ದೇಶಿತನಿಗೆ ಅಥವಾ ನಾಮ ನಿರ್ದೇಶಿತರಿಗೆ ಸರ್ಕಾರವು ಮತ್ತು ಬ್ಯಾಂಕು ಯಾವುದೇ ಸಂದಾಯ ಮಾಡಿದಾಗ, ಆ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಸಂಪೂರ್ಣ

ತೀರಿಕೆಯಾಗಿದೆ ಎಂದಾಗತಕ್ಕದ್ದು ಹಾಗೂ ಸರ್ಕಾರವು ಮತ್ತು ಬ್ಯಾಂಕು ತನ್ನ ಹೊಣೆಗಾರಿಕೆಯಿಂದ ವಿಮುಕ್ತಿಗೊಂಡಂತಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ನಾಮ ನಿರ್ದೇಶನವು ಅಥವಾ ನೇಮಕವು, ನಾಮ ನಿರ್ದೇಶಿತನು ಅಥವಾ ಒಬ್ಬನಿಗಿಂತ ಹೆಚ್ಚು ನಾಮ ನಿರ್ದೇಶಿತರಿದ್ದಲ್ಲಿ ಆ ಎಲ್ಲ ನಾಮ ನಿರ್ದೇಶಿತರು, ನಾಮ ನಿರ್ದೇಶನ ಮಾಡುವ ಸರ್ಕಾರಿ ಭದ್ರತಾ ಪತ್ರದ ಧಾರಕನಿಗಿಂತ ಅಥವಾ ಜಂಟಿ ಧಾರಕರಿಗಿಂತ ಮೊದಲೇ ಮರಣ ಹೊಂದಿದ ಪಕ್ಷದಲ್ಲಿ ಶೂನ್ಯವಾಗತಕ್ಕದ್ದು.

(3) ಸರ್ಕಾರಿ ಭದ್ರತಾ ಪತ್ರದ ಮೇಲೆ ತತ್ಕಾಲದಲ್ಲಿ ಬಾಕಿಯಿರುವ ಮೊತ್ತವು, ಇಬ್ಬರು ಅಥವಾ ಹೆಚ್ಚಿನ ನಾಮ ನಿರ್ದೇಶಿತರಿಗೆ ಸಂದಾಯವಾಗಬೇಕಾಗಿದ್ದಲ್ಲಿ ಮತ್ತು ಇಬ್ಬರಲ್ಲಿ ಒಬ್ಬರು ಅಥವಾ ಅವರಲ್ಲಿ ಯಾರಾದರೂ ಮೃತರಾದಲ್ಲಿ, ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯವು ಆ ನಾಮ ನಿರ್ದೇಶಿತರ ಪೈಕಿ ಬದುಕುಳಿದವನಲ್ಲಿ ಅಥವಾ ಬದುಕುಳಿದವರಲ್ಲಿ ನಿಹಿತಗೊಳ್ಳತಕ್ಕದ್ದು ಮತ್ತು ಅದರ ಮೇಲೆ ತತ್ಕಾಲದಲ್ಲಿ ಬಾಕಿಯಿರುವ ಮೊತ್ತವನ್ನು ತದನುಸಾರವಾಗಿ ಸಂದಾಯ ಮಾಡತಕ್ಕದ್ದು.

(4) 5ನೇ ಪ್ರಕರಣದ (2)ನೇ ಉಪಪ್ರಕರಣದ ಅನುಸಾರವಾಗಿ ಮಾಡಿದ ಸರ್ಕಾರೀ ಭದ್ರತಾ ಪತ್ರದ ವರ್ಗಾವಣೆಯಿಂದಾಗಿ, ಹಿಂದೆ ಮಾಡಿದ ನಾಮ ನಿರ್ದೇಶನವು ತಂತಾನೆ ರದ್ದಾಗತಕ್ಕದ್ದು:

ಪರಂತು, ಸರ್ಕಾರಿ ಭದ್ರತಾ ಪತ್ರವು, ಯಾವುದೇ ಉದ್ದೇಶಕ್ಕಾಗಿ ಒತ್ತೆಯಾಗಿ ಅಥವಾ ಭದ್ರತೆಯ ರೂಪದಲ್ಲಿ ವ್ಯಕ್ತಿಯೋರ್ವನ ಸ್ವಾಧೀನದಲ್ಲಿದ್ದರೆ, ಅಂಥ ಸ್ವಾಧೀನತೆಯು ನಾಮ ನಿರ್ದೇಶನವನ್ನು ರದ್ದುಗೊಳಿಸುವ ಪರಿಣಾಮವುಳ್ಳದ್ದಾಗಿರತಕ್ಕದ್ದಲ್ಲ, ಆದರೆ, ನಾಮ ನಿರ್ದೇಶಿತನ ಹಕ್ಕು, ಹಾಗೆ ಅದರ ಸ್ವಾಧೀನ ಹೊಂದಿರುವ ವ್ಯಕ್ತಿಯ ಹಕ್ಕಿಗೆ ಒಳಪಟ್ಟಿರತಕ್ಕದ್ದು.

(5) ಸರ್ಕಾರವು, ಬ್ಯಾಂಕಿನ ಶಿಫಾರಸಿನ ಮೇಲೆ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ನಾಮ ನಿರ್ದೇಶನ ಸೌಲಭ್ಯವನ್ನು ವಿಸ್ತರಿಸಬಹುದು.

(6) ಉಪಪ್ರಕರಣ (1) ರಲ್ಲಿರುವುದು ಯಾವುದೂ, ಸರ್ಕಾರೀ ಭದ್ರತಾ ಪತ್ರಕ್ಕೆ ಯಾವ ವ್ಯಕ್ತಿಯ ಹಕ್ಕನ್ನು ಮತ್ತು ಸ್ವಾಮ್ಯವನ್ನು ಸರ್ಕಾರವು ಅಥವಾ ಬ್ಯಾಂಕು ಮಾನ್ಯ ಮಾಡಿದೆಯೋ ಅಥವಾ ಯಾವ ವ್ಯಕ್ತಿಗೆ (1)ನೇ ಉಪಪ್ರಕರಣದ ಮೇರೆಗೆ ಸರ್ಕಾರವು ಅಥವಾ ಬ್ಯಾಂಕು ಸರ್ಕಾರಿ ಭದ್ರತಾ ಪತ್ರದ ಮೇಲಿನ ಬಾಕಿ ಮೊತ್ತವನ್ನು ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಯ ವಿರುದ್ಧ ಯಾರೇ ವ್ಯಕ್ತಿಯು ಹೊಂದಿರಬಹುದಾದ ಹಕ್ಕಿಗೆ ಅಥವಾ ಕ್ಲೇಮಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(7) ಸರ್ಕಾರಿ ಭದ್ರತಾ ಪತ್ರವು ಯಾರ ಹೆಸರಿನಲ್ಲಿ ಇದೆಯೋ ಆ ವ್ಯಕ್ತಿಯ ಅಥವಾ ವ್ಯಕ್ತಿಗಳ ಅಥವಾ ಅದರ ನಾಮ ನಿರ್ದೇಶಿತರ ಹೊರತು, ಯಾರೇ ವ್ಯಕ್ತಿಯ ಯಾವುದೇ ಕ್ಲೇಮಿನ ನೋಟೀಸನ್ನು ಬ್ಯಾಂಕು ಅಥವಾ ಸರ್ಕಾರವು ಸ್ವೀಕರಿಸತಕ್ಕದ್ದಲ್ಲ ಅಥವಾ ಬ್ಯಾಂಕಿಗೆ ಅಥವಾ ಸರ್ಕಾರಕ್ಕೆ ಅದನ್ನು ವ್ಯಕ್ತವಾಗಿ ನೀಡಿದ್ದರೂ ಕೂಡ ಬ್ಯಾಂಕು ಅಥವಾ ಸರ್ಕಾರವು ಯಾವುದೇ ಅಂಥ ನೋಟೀಸಿಗೆ ಬದ್ಧವಾಗಿರತಕ್ಕದ್ದಲ್ಲ:

ಪರಂತು, ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯವು ನೀಡಿದ ಯಾವುದೇ ಡಿಕ್ರಿ, ಆದೇಶ, ಪ್ರಮಾಣಪತ್ರ ಅಥವಾ ಇತರ ಅಧಿಕಾರಪತ್ರವನ್ನು ಬ್ಯಾಂಕಿಗೆ ಅಥವಾ ಸರ್ಕಾರಕ್ಕೆ ಹಾಜರುಪಡಿಸಿದಲ್ಲಿ, ಬ್ಯಾಂಕು ಅಥವಾ ಸರ್ಕಾರವು ಅಂಥ ಡಿಕ್ರಿ, ಆದೇಶ, ಪ್ರಮಾಣಪತ್ರ ಅಥವಾ ಇತರ ಅಧಿಕಾರ ಪತ್ರಕ್ಕೆ ಯುಕ್ತ ಗಮನ ನೀಡತಕ್ಕದ್ದು.

**10. ಅಪ್ರಾಪ್ತ ವಯಸ್ಕನಿಗೆ ಅಥವಾ ಮನೋವಿಕಲ ವ್ಯಕ್ತಿಗೆ ಸೇರಿದ ಸರ್ಕಾರಿ ಭದ್ರತಾ ಪತ್ರಗಳು.–** (1) ಯಾವುದೇ ಸರ್ಕಾರಿ ಭದ್ರತಾ ಪತ್ರವನ್ನು ಅಪ್ರಾಪ್ತ ವಯಸ್ಕನ ಪರವಾಗಿ ಹೊಂದಿದ್ದಲ್ಲಿ, ಸರ್ಕಾರಿ ಭದ್ರತಾ ಪತ್ರದ ಮೇಲೆ ಬಾಕಿ ಇರುವ ಅಸಲಿನ ರೂಪದಲ್ಲಾಗಲಿ ಅಥವಾ ಅದರ ಮೇಲಿನ ಬಡ್ಡಿಯ ರೂಪದಲ್ಲಾಗಲಿ ತತ್ಕಾಲದಲ್ಲಿ ಬಾಕಿಯಿರುವ ಹಣವನ್ನು, ಅಂಥ ಅಪ್ರಾಪ್ತ ವಯಸ್ಕನ ತಂದೆ ಅಥವಾ ತಾಯಿಗೆ ಸಂದಾಯ ಮಾಡಬಹುದು ಮತ್ತು ತಂದೆ ತಾಯಿ ಇಬ್ಬರೂ ಬದುಕಿರದಿದ್ದಲ್ಲಿ ಅಥವಾ ಬದುಕಿರುವ ತಂದೆ ತಾಯಿಯಿಬ್ಬರೂ ಅಥವಾ ತಂದೆ ತಾಯಿಯರಲ್ಲಿ ಬದುಕಿರುವ ಒಬ್ಬರು ವ್ಯವಹರಿಸಲು ಅಸಮರ್ಥರಾಗಿದ್ದಲ್ಲಿ, ಅಪ್ರಾಪ್ತ ವಯಸ್ಕನ ಸ್ವತ್ತಿನ ಉಸ್ತುವಾರಿ ವಹಿಸಲು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಹಕ್ಕುಳ್ಳ ವ್ಯಕ್ತಿಗೆ ಆ ಹಣವನ್ನು ಸಂದಾಯ ಮಾಡಬಹುದು.

(2) ಸರ್ಕಾರಿ ಭದ್ರತಾ ಪತ್ರವು, ಅಪ್ರಾಪ್ತ ವಯಸ್ಕನಿಗೆ ಅಥವಾ ಮನೋ ವಿಕಲನಾಗಿರುವ, ತನ್ನ ವ್ಯವಹಾರಗಳನ್ನು ನಿರ್ವಹಿಸಲು ಅಸಮರ್ಥನಾಗಿರುವ ವ್ಯಕ್ತಿಗೆ ಸೇರಿರುವಾಗ ಮತ್ತು ಸರ್ಕಾರಿ ಭದ್ರತಾ ಪತ್ರದ ಬಾಕಿ ಇರುವ ಅಸಲು ಮೌಲ್ಯವು ಒಟ್ಟು ಒಂದು ಲಕ್ಷ ರೂಪಾಯಿಗಳನ್ನು ಅಥವಾ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ನಿಗದಿಪಡಿಸಬಹುದಾದಂತೆ, ಒಂದು ಕೋಟಿ ರೂಪಾಯಿಗಳಿಗೆ ಮೀರದಂಥ ಹೆಚ್ಚಿನ ಮೊತ್ತವನ್ನು ಮೀರದಿದ್ದಾಗ, ಬ್ಯಾಂಕು ಅಂಥ ಸರ್ಕಾರಿ ಭದ್ರತಾ ಪತ್ರವನ್ನು, ಅಪ್ರಾಪ್ತ ವಯಸ್ಕನನ್ನು ಅಥವಾ ಮನೋವಿಕಲ ವ್ಯಕ್ತಿಯನ್ನು ಪ್ರತಿನಿಧಿಸುತ್ತಾನೆಂದು ತಾನು ಪರಿಗಣಿಸುವಂಥ ವ್ಯಕ್ತಿಯಲ್ಲಿ ನಿಹಿತಗೊಳಿಸುವುದಕ್ಕಾಗಿ ಅದು ಯುಕ್ತವೆಂದು ಭಾವಿಸುವಂಥ ಆದೇಶವನ್ನು, ಮಾಡಬಹುದು.

**11. ಭದ್ರತಾ ಪತ್ರಗಳ ದ್ವಿ ಪ್ರತಿಯನ್ನು ಮತ್ತು ಪರಿವರ್ತನೆ, ಕ್ರೋಡೀಕರಣ, ಉಪ ವಿಭಜನೆ, ನವೀಕರಣ ಮಾಡಿದ ಮೇಲೆ, ವಿಕೃತಿಗೊಂಡಾಗ ಅಥವಾ ಪೂರ್ವಸ್ಥಿತಿಗೆ ತಂದಾಗ ಹೊಸ ಭದ್ರತಾ ಪತ್ರಗಳನ್ನು ನೀಡುವುದು.–** (1) ಸರ್ಕಾರಿ ಭದ್ರತಾ ಪತ್ರಕ್ಕೆ ಹಕ್ಕುಳ್ಳ ವ್ಯಕ್ತಿಯು, ಸರ್ಕಾರಿ ಭದ್ರತಾ ಪತ್ರವು ಕಳೆದುಹೋಗಿದೆ, ಕಳುವಾಗಿದೆ, ನಾಶವಾಗಿದೆ, ವಿರೂಪಗೊಂಡಿದೆ ಅಥವಾ ತುಂಡು ತುಂಡಾಗಿದೆ ಎಂದು ತಿಳಿಸಿ ಅರ್ಜಿ ಸಲ್ಲಿಸಿದರೆ, ಸರ್ಕಾರಿ ಭದ್ರತಾ ಪತ್ರವು ಕಳೆದುಹೋದ, ಕಳುವಾದ, ನಾಶವಾದ, ವಿರೂಪಗೊಂಡ ಅಥವಾ ತುಂಡು ತುಂಡಾದ ಬಗ್ಗೆ ಬ್ಯಾಂಕಿಗೆ ಮನವರಿಕೆಯಾಗುವಂತೆ ರುಜುವಾತು ಒದಗಿಸಿದಾಗ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ, ಅರ್ಜಿದಾರನಿಗೆ ಸರ್ಕಾರಿ ಭದ್ರತಾ ಪತ್ರದ ದ್ವಿಪ್ರತಿಯನ್ನು ನೀಡುವಂತೆ ಬ್ಯಾಂಕು ಆದೇಶಿಸಬಹುದು.

(2) ಸರ್ಕಾರಿ ಭದ್ರತಾ ಪತ್ರಕ್ಕೆ ಹಕ್ಕುಳ್ಳ ವ್ಯಕ್ತಿಯು, ಸರ್ಕಾರಿ ಭದ್ರತಾ ಪತ್ರವನ್ನು ಬೇರೊಂದು ರೂಪದ ಸರ್ಕಾರಿ ಭದ್ರತಾ ಪತ್ರವಾಗಿ ಪರಿವರ್ತಿಸಬೇಕೆಂದು ಅಥವಾ ಬೇರೊಂದು ಸಾಲಕ್ಕೆ ಸಂಬಂಧಿಸಿದಂತೆ ನೀಡಲಾದ ಸರ್ಕಾರಿ ಭದ್ರತಾ ಪತ್ರವಾಗಿ ಪರಿವರ್ತಿಸಬೇಕೆಂದು ಅಥವಾ ಅದೇ ತರಹದ ಇತರ ಸರ್ಕಾರಿ ಭದ್ರತಾ ಪತ್ರಗಳೊಂದಿಗೆ ಅದನ್ನು ಕ್ರೋಡೀಕರಿಸಬೇಕೆಂದು ಅಥವಾ ಉಪ ವಿಭಜಿಸಬೇಕೆಂದು ಅಥವಾ ನವೀಕರಿಸಬೇಕೆಂದು, ಬೇರ್ಪಡಿಸಬೇಕೆಂದು ಅಥವಾ ಪೂರ್ವಸ್ಥಿತಿಗೆ ತರಬೇಕೆಂದು ಕೋರಿ ಬ್ಯಾಂಕಿಗೆ ಅರ್ಜಿ ಸಲ್ಲಿಸಿದರೆ, ಬ್ಯಾಂಕು

ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ, ಆ ಸರ್ಕಾರಿ ಭದ್ರತಾ ಪತ್ರವನ್ನು ರದ್ದು ಮಾಡಬಹುದು ಮತ್ತು ಹೊಸ ಸರ್ಕಾರಿ ಭದ್ರತಾ ಪತ್ರವನ್ನು ಅಥವಾ ಸರ್ಕಾರಿ ಭದ್ರತಾ ಪತ್ರಗಳನ್ನು ನೀಡುವಂತೆ ಆದೇಶಿಸಬಹುದು.

**ವಿವರಣೆ:-** ಸರ್ಕಾರಿ ಭದ್ರತಾ ಪತ್ರವನ್ನು ಬಡ್ಡಿ ಮತ್ತು ಅಸಲಿಗೆ ಪ್ರತ್ಯೇಕವಾಗಿ ಬೇರ್ಪಡಿಸಬಹುದು ಅಥವಾ ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಧಾರಕನ ಅರ್ಜಿಯ ಮೇಲೆ ಅದನ್ನು ಪೂರ್ವಸ್ಥಿತಿಗೆ ತರಬಹುದು.

(3) ಸರ್ಕಾರಿ ಭದ್ರತಾ ಪತ್ರದ ದ್ವಿಪ್ರತಿಯನ್ನು ಅಥವಾ ಹೊಸ ಸರ್ಕಾರಿ ಭದ್ರತಾ ಪತ್ರವನ್ನು ಈ ಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ನೀಡಲಾಗಿದೆಯೋ ಆ ವ್ಯಕ್ತಿಯನ್ನು 18ನೇ ಪ್ರಕರಣದ ಉದ್ದೇಶಗಳಿಗಾಗಿ ಸರ್ಕಾರಿ ಭದ್ರತಾ ಪತ್ರದ ಧಾರಕನೆಂದು ಬ್ಯಾಂಕು ಮಾನ್ಯ ಮಾಡಿದೆಯೆಂದು ಭಾವಿಸತಕ್ಕದ್ದು; ಮತ್ತು ಯಾರೇ ವ್ಯಕ್ತಿಗೆ ಹಾಗೆ ನೀಡಿದ ಸರ್ಕಾರಿ ಭದ್ರತಾ ಪತ್ರದ ದ್ವಿಪ್ರತಿಯು ಅಥವಾ ಹೊಸ ಸರ್ಕಾರಿ ಭದ್ರತಾ ಪತ್ರವು ಸರ್ಕಾರದ ಮತ್ತು ಅಂಥ ವ್ಯಕ್ತಿಯ ಹಾಗೂ ಅವನ ಮೂಲಕ ತದನಂತರ ಸ್ವಾಮ್ಯವನ್ನು ಪಡೆದ ಎಲ್ಲಾ ವ್ಯಕ್ತಿಗಳ ನಡುವೆ ಹೊಸ ಕರಾರು ಆಗುತ್ತದೆಂದು ಭಾವಿಸತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ಹೊಸ ಭದ್ರತಾ ಪತ್ರದ ನೀಡಿಕೆಯು, ಯಾವ ಮೂರನೇ ಪಕ್ಷಕಾರರ ಅಧಿಕಾರವನ್ನು ಅಥವಾ ಇತರ ಹಿತಾಸಕ್ತಿಯನ್ನು ಕಾನೂನುಬದ್ಧವಾಗಿ ಸೃಜಿಸಲಾಗಿತ್ತೋ ಮತ್ತು ಹೊಸ ಭದ್ರತಾ ಪತ್ರವನ್ನು ನೀಡುವ ಕಾಲದಲ್ಲಿ ಅದು ಅಸ್ತಿತ್ವದಲ್ಲಿತ್ತೋ, ಆ ಮೂರನೇ ಪಕ್ಷಕಾರರ ಹಿತಾಸಕ್ತಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**12. ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯದ ಬಗ್ಗೆ ವಿವಾದ ಉಂಟಾದಲ್ಲಿ ಬ್ಯಾಂಕಿನಿಂದ ಕ್ಷಿಪ್ರ ನಿರ್ಧಾರ.-** (1) ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯಕ್ಕೆ ಸಂಬಂಧಿಸಿದಂತೆ ಸಂದೇಹವಿದೆಯೆಂದು ಬ್ಯಾಂಕು ಅಭಿಪ್ರಾಯಪಟ್ಟರೆ, ರಚಿಸಬಹುದಾದಂಥ ವಿನಿಯಮಗಳನುಸಾರ, ಬ್ಯಾಂಕಿನ ಉದ್ದೇಶಗಳಿಗಾಗಿ, ಯಾವ ವ್ಯಕ್ತಿಯನ್ನು ಅದಕ್ಕೆ ಹಕ್ಕುಳ್ಳವನೆಂದು ಭಾವಿಸತಕ್ಕದ್ದೋ ಆ ವ್ಯಕ್ತಿಯನ್ನು ನಿರ್ಧರಿಸಲು ಅದು ಕ್ರಮಕೈಗೊಳ್ಳಬಹುದು.

(2) ಈ ಅಧಿನಿಯಮದ ಮೇರೆಗೆ ಯಾವ ಆದೇಶವನ್ನು ಮಾಡಲು ಬ್ಯಾಂಕಿಗೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಆದೇಶವನ್ನು ಮಾಡುವ ಉದ್ದೇಶಕ್ಕಾಗಿ, ಬ್ಯಾಂಕು ಯಾವ ವ್ಯಕ್ತಿಯ ಸಾಕ್ಷ್ಯವನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸುತ್ತದೋ ಆ ಯಾರೇ ವ್ಯಕ್ತಿಯ ಅಂಥ ಸಾಕ್ಷ್ಯವನ್ನು ಇಡಿಯಾಗಿ ಅಥವಾ ಅದರ ಯಾವುದೇ ಭಾಗವನ್ನು ದಾಖಲಿಸಿಕೊಳ್ಳಲು ಅಥವಾ ದಾಖಲಿಸಿಕೊಳ್ಳುವಂತೆ ಮಾಡಲು ಜಿಲ್ಲಾ ಮ್ಯಾಜಿಸ್ಟ್ರೇಟ್‌ನನ್ನು ಕೋರಬಹುದು ಮತ್ತು ಹಾಗೆ ಕೋರಿದಾಗ ಜಿಲ್ಲಾ ಮ್ಯಾಜಿಸ್ಟ್ರೇಟನು ತಾನಾಗಿಯೇ ಸಾಕ್ಷ್ಯವನ್ನು ದಾಖಲಿಸಬಹುದು ಅಥವಾ ಸಾಕ್ಷ್ಯವನ್ನು ದಾಖಲಿಸಲು ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ಅಧಿಕಾರ ಪಡೆದ ಯಾರೇ ಕಾರ್ಯ ನಿರ್ವಾಹಕ ಮ್ಯಾಜಿಸ್ಟ್ರೇಟನಿಗೆ ನಿರ್ದೇಶನ ನೀಡಬಹುದು ಮತ್ತು ಅದರ ಒಂದು ಪ್ರತಿಯನ್ನು ಬ್ಯಾಂಕಿಗೆ ಕಳುಹಿಸತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ನಿಹಿತಗೊಳಿಸುವ ಆದೇಶವನ್ನು ಮಾಡುವ ಉದ್ದೇಶಕ್ಕಾಗಿ, ಬ್ಯಾಂಕು ಯಾರ ಸಾಕ್ಷ್ಯವನ್ನು ಅಗತ್ಯಪಡಿಸುತ್ತದೋ ಆ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು ದಾಖಲಿಸಿಕೊಳ್ಳುವಂತೆ ಬ್ಯಾಂಕು, ತನ್ನ ಅಧಿಕಾರಿಗಳ ಪೈಕಿ ಒಬ್ಬರಿಗೆ ನಿರ್ದೇಶಿಸಬಹುದು ಅಥವಾ ಶಪಥಪತ್ರದಲ್ಲಿ ಸಾಕ್ಷ್ಯವನ್ನು ಸ್ವೀಕರಿಸಬಹುದು.

(4) ಈ ಪ್ರಕರಣದ ಅನುಸಾರ ಕಾರ್ಯ ನಿರ್ವಹಿಸುವ ಮ್ಯಾಜಿಸ್ಟ್ರೇಟ್‌ನು ಅಥವಾ ಬ್ಯಾಂಕಿನ ಅಧಿಕಾರಿಯು, ತಾನು ವಿಚಾರಣೆ ಮಾಡುವ ಯಾರೇ ಸಾಕ್ಷಿದಾರನಿಗೆ ಪ್ರಮಾಣ ವಚನ ಬೋಧಿಸಬಹುದು.

**13. ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ ಅನ್ವಯಿಸುವ ಕಾನೂನು.–** ಅನುಕೂಲದ ದೃಷ್ಟಿಯಿಂದ ಸರ್ಕಾರವು, ಸರ್ಕಾರಿ ಭದ್ರತಾ ಪತ್ರದ ಮೇಲಿನ ಸಂದಾಯಗಳಿಗೆ ಭಾರತದ ಹೊರಗೆ ಬೇರೆಲ್ಲಿಯಾದರೂ ವ್ಯವಸ್ಥೆ ಮಾಡಬಹುದಾದದ್ದೇನೇ ಇದ್ದರೂ, ಸರ್ಕಾರೀ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟಂತೆ ಎಲ್ಲಾ ವ್ಯಕ್ತಿಗಳ ಹಕ್ಕುಗಳನ್ನು, ಈ ಅಧಿನಿಯಮದ ಮೂಲಕ ವ್ಯವಹರಿಸುವಂಥ ಎಲ್ಲಾ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಭಾರತದ ಕಾನೂನಿನ ಮೂಲಕ ಮತ್ತು ಭಾರತದ ನ್ಯಾಯಾಲಯಗಳಲ್ಲಿ ನಿರ್ಧರಿಸತಕ್ಕದ್ದು.

**14. ನಿಹಿತಗೊಳಿಸುವ ಆದೇಶ ಮಾಡುವವರೆಗೆ ಸಂದಾಯಗಳನ್ನು ಮತ್ತು ವರ್ಗಾವಣೆಗಳ ನೋಂದಣಿಯನ್ನು ಮುಂದೂಡುವುದು.–** ಸರ್ಕಾರಿ ಭದ್ರತಾ ಪತ್ರವನ್ನು ಯಾರೇ ವ್ಯಕ್ತಿಯಲ್ಲಿ ನಿಹಿತಗೊಳಿಸಲು ಈ ಅಧಿನಿಯಮದ ಮೇರೆಗೆ ಆದೇಶ ಮಾಡಲು ಬ್ಯಾಂಕು ಆಲೋಚಿಸಿರುವಲ್ಲಿ, ಬ್ಯಾಂಕು ನಿಹಿತಗೊಳಿಸುವ ಆದೇಶವನ್ನು ಮಾಡುವವರೆಗೆ, ಸಂದರ್ಭಾನುಸಾರ, ಸರ್ಕಾರಿ ಭದ್ರತಾ ಪತ್ರದ ಮೇಲಿನ ಬಡ್ಡಿಯ ಅಥವಾ ಅದರ ವಾಯಿದೆ ತುಂಬಿದಾಗಿನ ಮೌಲ್ಯದ ಸಂದಾಯವನ್ನು ಅಮಾನತ್ತಿನಲ್ಲಿಡಬಹುದು ಅಥವಾ 7ನೇ ಪ್ರಕರಣದ, 10ನೇ ಪ್ರಕರಣದ, 11ನೇ ಪ್ರಕರಣದ ಅಥವಾ 12ನೇ ಪ್ರಕರಣದ ಮೇರೆಗೆ ಯಾವುದೇ ಆದೇಶ ಮಾಡುವುದನ್ನು ಅಥವಾ ಸರ್ಕಾರಿ ಭದ್ರತಾ ಪತ್ರದ ಯಾವುದೇ ವರ್ಗಾವಣೆಯ ನೋಂದಣಿಯನ್ನು ಮುಂದೂಡಬಹುದು.

**15. ಬಾಂಡುಗಳನ್ನು ಅಗತ್ಯಪಡಿಸಲು ಬ್ಯಾಂಕಿನ ಅಧಿಕಾರ.–** (1) ಈ ಅಧಿನಿಯಮದ ಮೇರೆಗೆ ಯಾವ ಆದೇಶವನ್ನು ಮಾಡಲು ಬ್ಯಾಂಕಿಗೆ ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಆದೇಶವನ್ನು ಮಾಡುವ ಮುಂಚೆ, ಬ್ಯಾಂಕು, ಯಾವ ವ್ಯಕ್ತಿಯ ಪರವಾಗಿ ಆದೇಶವನ್ನು ಮಾಡಬೇಕಾಗಿದೆಯೋ ಆ ವ್ಯಕ್ತಿಯನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಒಂದು ಅಥವಾ ಹೆಚ್ಚಿನ ಜಾಮೀನುಗಳೊಂದಿಗೆ ನಷ್ಟಭರ್ತಿ ಬಾಂಡನ್ನು ಬರೆದುಕೊಡುವಂತೆ ಅಥವಾ ಆದೇಶದ ವಸ್ತು ವಿಷಯದ ಮೌಲ್ಯದ ಎರಡರಷ್ಟನ್ನು ಮೀರದ ಭದ್ರತೆಯನ್ನು ನೀಡುವಂತೆ ಅಗತ್ಯಪಡಿಸಬಹುದು. ಈ ನಷ್ಟ ಭರ್ತಿ ಬಾಂಡನ್ನು ಅಥವಾ ಭದ್ರತೆಯನ್ನು (2)ನೇ ಉಪಪ್ರಕರಣದ ಮುಂದುವರಿಕೆಯಾಗಿ ಬ್ಯಾಂಕಿಗೆ ಅಥವಾ ಯಾವ ವ್ಯಕ್ತಿಗೆ ಬ್ಯಾಂಕು ಆ ನಷ್ಟಭರ್ತಿ ಬಾಂಡನ್ನು ಅಥವಾ ಭದ್ರತೆಯನ್ನು ಹಸ್ತಾಂತರಿಸಬಹುದೋ ಆ ಯಾರೇ ವ್ಯಕ್ತಿಗೆ ಅದರ ಮೊತ್ತವನ್ನು ಸಂದಾಯ ಮಾಡಲು ಬ್ಯಾಂಕಿನ ವಶದಲ್ಲಿಟ್ಟುಕೊಳ್ಳತಕ್ಕದ್ದು.

(2) ಯಾವುದೇ ಅಂಥ ಆದೇಶದ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಕ್ಲೇಮು ಮಾಡುವುದಕ್ಕೆ ಮುಂಚೆ, ನ್ಯಾಯಾಲಯವು ಯಶಸ್ವೀ ಕ್ಲೇಮುದಾರನಿಗೆ ನಷ್ಟಭರ್ತಿ ಬಾಂಡನ್ನು ಅಥವಾ ಭದ್ರತೆಯನ್ನು ಹಸ್ತಾಂತರಿಸುವಂತೆ ಆದೇಶಿಸಬಹುದು ಹಸ್ತಾಂತರ ಪಡೆದವನು ಆ ತರುವಾಯ ಅಂಥ ಕ್ಲೇಮಿನ ಮಟ್ಟಿಗೆ ನಷ್ಟ ಭರ್ತಿ ಬಾಂಡಿನಲ್ಲಿ ತಿಳಿಸಿರುವಂತೆ ಹಣ ಸಂದಾಯಕ್ಕೆ ಒತ್ತಾಯಿಸಲು ಅಥವಾ ಭದ್ರತೆಯನ್ನು ನಗದೀಕರಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**16. ರಾಜಪತ್ರದಲ್ಲಿ ನೋಟೀಸುಗಳ ಪ್ರಕಟಣೆ.–** ಈ ಅಧಿನಿಯಮದ ಮೇರೆಗೆ ಬ್ಯಾಂಕು ನೀಡಬೇಕೆಂದು ಅಗತ್ಯಪಡಿಸಿರುವ ಯಾವುದೇ ನೋಟೀಸನ್ನು ಅಂಚೆಯ ಮೂಲಕ ಜಾರಿಮಾಡಬಹುದು, ಆದರೆ, ಅಂಥ ಪ್ರತಿಯೊಂದು ನೋಟೀಸನ್ನು, ಸರ್ಕಾರಿ ಭದ್ರತಾ ಪತ್ರಕ್ಕೆ ನೋಟೀಸು ಸಂಬಂಧಪಡುವುದಕ್ಕೆ ಅನುಸಾರವಾಗಿಯೇ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಹೊರಡಿಸುವ ರಾಜಪತ್ರದಲ್ಲಿ ಅಥವಾ ರಾಜ್ಯದ ರಾಜ್ಯಪತ್ರದಲ್ಲಿ

ಕೂಡ ಬ್ಯಾಂಕು ಪ್ರಕಟಿಸತಕ್ಕದ್ದು ಮತ್ತು ಅಂಥ ಪ್ರಕಟಣೆಯ ನಂತರ, ಯಾರಿಗೆ ಆ ನೋಟೀಸನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆಯೋ ಆ ಎಲ್ಲಾ ವ್ಯಕ್ತಿಗಳಿಗೂ ಅದನ್ನು ತಲುಪಿಸಲಾಗಿದೆಯೆಂದು ಭಾವಿಸತಕ್ಕದ್ದು.

**17. ನಿಹಿತಗೊಳಿಸುವ ಆದೇಶದ ಕಾರ್ಯವಿಧಾನ ಮತ್ತು ವ್ಯಾಪ್ತಿ.–** (1) 7ನೇ ಪ್ರಕರಣದ, 10ನೇ ಪ್ರಕರಣದ, 11ನೇ ಪ್ರಕರಣದ, 12ನೇ ಪ್ರಕರಣದ ಮೇರೆಗೆ ನಿಹಿತಗೊಳಿಸುವ ಆದೇಶವನ್ನು ಮಾಡುವಾಗ ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಬ್ಯಾಂಕು ಅನುಸರಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಬ್ಯಾಂಕು ಮಾಡಿದ ಆದೇಶವು, ಸರ್ಕಾರಿ ಭದ್ರತಾ ಪತ್ರದ ಸಂಪೂರ್ಣ ಸ್ವಾಮ್ಯವನ್ನು ಅಥವಾ ಸಂಪೂರ್ಣ ಸ್ವಾಮ್ಯವನ್ನು ನಿಹಿತಗೊಳಿಸುವ ಮತ್ತೊಂದು ಆದೇಶವನ್ನು ಮಾಡುವವರೆಗೆ ಸರ್ಕಾರಿ ಭದ್ರತಾ ಪತ್ರದ ಮೇಲೆ ಪ್ರಾಪ್ತವಾದ ಮತ್ತು ಪ್ರಾಪ್ತವಾಗುವ ಬಡ್ಡಿಗೆ ಸಂಬಂಧಿಸಿದಂತೆ ಮಾತ್ರ ಸ್ವಾಮ್ಯವನ್ನು ನೀಡಬಹುದು.

**18. ಬ್ಯಾಂಕು ಮಾಡಿದ ಆದೇಶಗಳ ಕಾನೂನು ಪರಿಣಾಮ.–** ಒಬ್ಬ ವ್ಯಕ್ತಿಗೆ, ಸರ್ಕಾರೀ ಭದ್ರತಾ ಪತ್ರದ ಧಾರಕನನ್ನಾಗಿ ಬ್ಯಾಂಕು ಮಾನ್ಯತೆ ನೀಡುವುದನ್ನು ಮತ್ತು ಈ ಅಧಿನಿಯಮದ ಮೇರೆಗೆ ಬ್ಯಾಂಕು ಮಾಡಿದ ಯಾವುದೇ ಆದೇಶವನ್ನು, ಸರ್ಕಾರಿ ಭದ್ರತಾ ಪತ್ರದ ಧಾರಕನೆಂದು ಬ್ಯಾಂಕು ಮಾನ್ಯ ಮಾಡಿರುವ ವ್ಯಕ್ತಿಯೊಂದಿಗೆ ಅಥವಾ ಅಂಥ ಭದ್ರತಾ ಪತ್ರದಲ್ಲಿನ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಯಾರೇ ವ್ಯಕ್ತಿಯೊಂದಿಗೆ ಸರ್ಕಾರವು ಮತ್ತು ಬ್ಯಾಂಕು ಹೊಂದಿರುವ ಸಂಬಂಧಗಳಿಗೆ ಅಂಥ ಮಾನ್ಯತೆಯು ಅಥವಾ ಆದೇಶವು ಬಾಧಕವುಂಟು ಮಾಡದಿರುವಷ್ಟರ ಮಟ್ಟಿಗೆ ಯಾವುದೇ ನ್ಯಾಯಾಲಯದ ಮೂಲಕ ಪ್ರಶ್ನಿಸತಕ್ಕದ್ದಲ್ಲ; ಮತ್ತು ಯಾರೇ ವ್ಯಕ್ತಿಗೆ ಬ್ಯಾಂಕು ನೀಡಿದ ಅಂಥ ಮಾನ್ಯತೆಯನ್ನು ಅಥವಾ ಯಾರೇ ವ್ಯಕ್ತಿಯಲ್ಲಿ ಸರ್ಕಾರಿ ಭದ್ರತಾ ಪತ್ರವನ್ನು ನಿಹಿತಗೊಳಿಸಿ ಬ್ಯಾಂಕು ಮಾಡಿದ ಯಾವುದೇ ಆದೇಶವನ್ನು, ಅವನ ಖಾತೆಯಲ್ಲಿ ಹೊಂದಿದ್ದ ಮತ್ತು ಸ್ವೀಕರಿಸಿದ ಹಣಕ್ಕಾಗಿ ಭದ್ರತಾಪತ್ರದ ಹಕ್ಕುಳ್ಳ ಒಡೆಯನಿಗೆ ಅವನ ವೈಯಕ್ತಿಕ ಹೊಣೆಗಾರಿಕೆಗೆ ಮಾತ್ರ ಒಳಪಟ್ಟು ಭದ್ರತಾ ಪತ್ರದ ಸ್ವಾಮ್ಯವನ್ನು ಆ ವ್ಯಕ್ತಿಗೆ ನೀಡುವುದಕ್ಕಾಗಿ ಜಾರಿಗೊಳಿಸತಕ್ಕದ್ದು.

**19. ನ್ಯಾಯಾಲಯದ ಆದೇಶದಿಂದ ವ್ಯವಹರಣೆಗಳಿಗೆ ತಡೆ.–** ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ, ಬ್ಯಾಂಕು, ಈ ಅಧಿನಿಯಮದ ಮೇರೆಗೆ ಯಾವ ಆದೇಶವನ್ನು ಮಾಡಲು ಅಧಿಕಾರ ಹೊಂದಿದೆಯೋ ಆ ಯಾವುದೇ ಆದೇಶವನ್ನು ಮಾಡಲು ಅದು ಉದ್ದೇಶಿಸಿರುವಲ್ಲಿ, ಮತ್ತು ಆ ಆದೇಶವನ್ನು ಮಾಡುವುದಕ್ಕೆ ಮುಂಚೆ ಆ ಬ್ಯಾಂಕು, ಅಂಥ ಆದೇಶವನ್ನು ಮಾಡುವುದಕ್ಕೆ ತಡೆ ನೀಡಿರುವ ಆದೇಶವನ್ನು ಭಾರತದಲ್ಲಿನ ಒಂದು ನ್ಯಾಯಾಲಯದಿಂದ ಸ್ವೀಕರಿಸಿದಲ್ಲಿ, ಬ್ಯಾಂಕು,–

(ಎ) ನ್ಯಾಯಾಲಯದ ಮುಂದಿನ ಆದೇಶವನ್ನು ಸ್ವೀಕರಿಸುವವರೆಗೆ ಭದ್ರತಾ ಪತ್ರವನ್ನು ಅದರ ಮೇಲೆ ಸಂದಾಯ ಮಾಡಿಲ್ಲದ ಅಥವಾ ಅದರ ಮೇಲೆ ಪ್ರಾಪ್ತವಾಗುವ ಯಾವುದೇ ಬಡ್ಡಿಯೊಂದಿಗೆ ತನ್ನ ಸ್ವಾಧೀನದಲ್ಲಿರಿಸಿಕೊಂಡಿರತಕ್ಕದ್ದು; ಅಥವಾ

(ಬಿ) ನ್ಯಾಯಾಲಯದ ಮುಂದೆ ಇರುವ ವ್ಯವಹರಣೆಗಳು ವಿಲೆಯಾಗುವವರೆಗೆ, ಯಾವ ರಾಜ್ಯದಲ್ಲಿ ಅಂಥ ನ್ಯಾಯಾಲಯವು ಇದೆಯೋ ಆ ರಾಜ್ಯಕ್ಕಾಗಿ ನೇಮಕ ಮಾಡಿದ ಅಧಿಕೃತ ಟ್ರಸ್ಟಿಗಳಿಗೆ ಭದ್ರತಾ ಪತ್ರವನ್ನು ವರ್ಗಾವಣೆ ಮಾಡುವಂತೆ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

**20. ನಿಹಿತಗೊಳಿಸುವ ವ್ಯವಹರಣೆಗಳನ್ನು ಬ್ಯಾಂಕು ರದ್ದುಗೊಳಿಸುವುದು.–** ಈ ಅಧಿನಿಯಮದ ಮೇರೆಗೆ, ಸರ್ಕಾರಿ ಭದ್ರತಾ ಪತ್ರವನ್ನು ಯಾರೇ ವ್ಯಕ್ತಿಯಲ್ಲಿ ನಿಹಿತಗೊಳಿಸುವ ಆದೇಶವನ್ನು ಮಾಡಲು ಬ್ಯಾಂಕು ಉದ್ದೇಶಿಸಿರುವಲ್ಲಿ, ಬ್ಯಾಂಕು ಆ ಆದೇಶವನ್ನು ಮಾಡುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಆ ಉದ್ದೇಶಕ್ಕಾಗಿ ಈಗಾಗಲೇ ಕೈಗೊಂಡ ಯಾವುದೇ ವ್ಯವಹರಣೆಗಳನ್ನು ರದ್ದುಮಾಡಬಹುದು ಮತ್ತು ಅಂಥ ರದ್ದಿಯಾತಿಯ ನಂತರ ಅಂಥ ಆದೇಶವನ್ನು ಮಾಡುವುದಕ್ಕೆ ಪುನಃ ಮುಂದಾಗಬಹುದು.

**21. ಸರ್ಕಾರಿ ಭದ್ರತಾ ಪತ್ರಗಳ ಮೇಲಿನ ಬಡ್ಡಿಗೆ ಸಂಬಂಧಿಸಿದಂತೆ ವಿಮೋಚನೆ.–** ಸರ್ಕಾರಿ ಭದ್ರತಾ ಪತ್ರದ ನಿಬಂಧನೆಗಳಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು, ಅಂಥ ಭದ್ರತಾ ಪತ್ರದ ಮೇಲೆ ಬಾಕಿ ಇರುವ ಮೊತ್ತದ ಸಂದಾಯಕ್ಕಾಗಿ ಯಾವ ದಿನಾಂಕದಂದು ತಗಾದೆಯನ್ನು ಮಾಡಬಹುದಾಗಿತ್ತೋ ಆ ಮುಂಚಿನ ದಿನಾಂಕದ ತರುವಾಯ ಗತಿಸಿದ ಯಾವುದೇ ಅವಧಿಗೆ ಸಂಬಂಧಿಸಿದಂತೆ ಅಂಥ ಭದ್ರತಾ ಪತ್ರದ ಮೇಲೆ ಬಡ್ಡಿಯನ್ನು ಕ್ಲೇಮು ಮಾಡಲು ಯಾರೇ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**22. ವಾಹಕ ಬಾಂಡುಗಳಿಗೆ ಸಂಬಂಧಿಸಿದಂತೆ ವಿಮೋಚನೆ.–** ವಾಹಕ ಬಾಂಡಿನಲ್ಲಿ ಅಥವಾ ಅಂಥ ವಾಹಕ ಬಾಂಡಿನ ಯಾವುದೇ ಬಡ್ಡಿ ಕೂಪನ್‌ನಲ್ಲಿ ತಿಳಿಸಿದ ಮೊತ್ತವು ಯಾವಾಗ ಸಂದಾಯಕ್ಕೆ ಬಾಕಿಯಾಗುತ್ತದೋ ಆ ದಿನಾಂಕದಂದು ಅಥವಾ ಅದರ ತರುವಾಯ, ಅದನ್ನು ಹಾಜರುಪಡಿಸಿದ ಮೇಲೆ, ಅಂಥ ಸಂದಾಯವನ್ನು ಮಾಡುವುದಕ್ಕೆ ಮುಂಚೆ, ಸಂದಾಯ ಮಾಡುವುದನ್ನು ತಡೆಯುವಂತೆ ನಿರ್ಬಂಧಿಸಿ ಭಾರತದಲ್ಲಿನ ನ್ಯಾಯಾಲಯವು ಸರ್ಕಾರಕ್ಕೆ ಆದೇಶವನ್ನು ಜಾರಿ ಮಾಡಿದ ಹೊರತು, ಅಂಥ ಬಾಂಡಿನ ಅಥವಾ ಕೂಪನ್ನಿನ ವಾಹಕನಿಗೆ ಆ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಸರ್ಕಾರವು ತನ್ನ ಎಲ್ಲಾ ಹೊಣೆಗಾರಿಕೆಯಿಂದ ವಿಮೋಚನೆಗೊಳ್ಳತಕ್ಕದ್ದು.

**23. ಬಡ್ಡಿಗೆ ಸಂಬಂಧಿಸಿದಂತೆ ಸರ್ಕಾರದ ಹೊಣೆಗಾರಿಕೆಯ ಕಾಲ ಪರಿಮಿತಿಯ ಅವಧಿ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅತಿ ಕಡಿಮೆ ಕಾಲ ಪರಿಮಿತಿ ಅವಧಿಯನ್ನು ನಿಗದಿಪಡಿಸದಿರುವಲ್ಲಿ, ಸರ್ಕಾರಿ ಭದ್ರತಾ ಪತ್ರದ ಮೇಲೆ ಬಾಕಿ ಇರುವ ಯಾವುದೇ ಬಡ್ಡಿಯ ಸಂದಾಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಹೊಣೆಗಾರಿಕೆಯು, ಬಡ್ಡಿಯ ರೂಪದಲ್ಲಿ ಬಾಕಿ ಇರುವ ಹಣವು ಯಾವ ದಿನಾಂಕದಂದು ಸಂದಾಯವಾಗಬೇಕಾಗಿದೆಯೋ ಆ ದಿನಾಂಕದಿಂದ ಆರು ವರ್ಷಗಳು ಮುಕ್ತಾಯವಾದ ಮೇಲೆ ಕೊನೆಗೊಳ್ಳತಕ್ಕದ್ದು:

ಪರಂತು, ಭದ್ರತಾ ಪತ್ರಗಳ ಧಾರಕರು, ಸದರಿ ಆರು ವರ್ಷಗಳ ಅವಧಿಯೊಳಗೆ ತಮ್ಮ ಕ್ಲೇಮುಗಳನ್ನು ಸಲ್ಲಿಸಲಾಗದಿದ್ದ ಸಂದರ್ಭಗಳಲ್ಲಿ, ಆರು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯವೂ ಬಡ್ಡಿ ಸಂದಾಯಕ್ಕಾಗಿ ಮಾಡಿದ ಪ್ರಾಮಾಣಿಕ ಕ್ಲೇಮನ್ನು ಸರ್ಕಾರವು ಪುರಸ್ಕರಿಸಬಹುದು.

(2) ಉಪಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ, ಯಾವ ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ, ಯಾವ ಸಂದರ್ಭಗಳಲ್ಲಿ ಮತ್ತು ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಬಡ್ಡಿಯನ್ನು ಸದರಿ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ತರುವಾಯ ಸಹ ಸಂದಾಯ ಮಾಡಬಹುದೋ ಅಂಥ ಭದ್ರತಾ ಪತ್ರಗಳನ್ನು, ಅಂಥ ಸಂದರ್ಭಗಳನ್ನು ಮತ್ತು ಅಂಥ ನಿಬಂಧನೆಗಳು ಮತ್ತು ಷರತ್ತುಗಳನ್ನು ಬ್ಯಾಂಕು ನಿರ್ದಿಷ್ಟಪಡಿಸಬಹುದು.

24. ದಸ್ತಾವೇಜುಗಳ ಪರಿಶೀಲನೆ.- ಸರ್ಕಾರದ ಸ್ವಾಧೀನದಲ್ಲಿ ಅಥವಾ ಅಭಿರಕ್ಷೆಯಲ್ಲಿ ಇರುವ ಯಾವುದೇ ಸರ್ಕಾರಿ ಭದ್ರತಾ ಪತ್ರದಿಂದ ಅಥವಾ ಸರ್ಕಾರಿ ಭದ್ರತಾ ಪತ್ರಗಳಿಗೆ ಅಥವಾ ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಸರ್ಕಾರವು ಅಥವಾ ಸರ್ಕಾರದ ಪರವಾಗಿ ಇಟ್ಟಿರುವ ಅಥವಾ ನಿರ್ವಹಿಸಿರುವ ಯಾವುದೇ ಪುಸ್ತಕದಿಂದ, ರಿಜಿಸ್ಟರಿನಿಂದ ಅಥವಾ ಇತರ ದಸ್ತಾವೇಜುಗಳಿಂದ ದೊರಕಿದ ಮಾಹಿತಿಯನ್ನು ನಿಯಮಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ರೀತಿಯಲ್ಲಿ ಹಾಗೂ ಅಂಥ ಷರತ್ತುಗಳಿಗೆ ಒಳಪಟ್ಟಂತೆ ಹೊರತು ಪರಿಶೀಲಿಸುವುದಕ್ಕೆ ಅಥವಾ ಪಡೆಯುವುದಕ್ಕೆ ಯಾರೇ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದಲ್ಲ.

25. ದಸ್ತಾವೇಜುಗಳ ಮೈಕ್ರೋಫಿಲ್ಮ್‌ಗಳು, ಪಡಿಯಚ್ಚು ಪ್ರತಿಗಳು, ಮ್ಯಾಗ್ನೆಟಿಕ್ ಟೇಪುಗಳು ಮತ್ತು ಕಂಪ್ಯೂಟರ್ ಪ್ರಿಂಟ್ ಔಟ್ ಗಳು ಸಾಕ್ಷ್ಯದ ದಸ್ತಾವೇಜುಗಳಾಗಿರುವುದು.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ,-

(ಎ) ದಸ್ತಾವೇಜಿನ ಮೈಕ್ರೋಫಿಲ್ಮ್ ಅಥವಾ ಅಂಥ ಮೈಕ್ರೋಫಿಲ್ಮ್‌ನಲ್ಲಿ ಒಳಗೊಂಡಿರುವ ಇಮೇಜಿನ ಅಥವಾ ಇಮೇಜುಗಳ (ಎನ್‌ಲಾರ್ಜ್ ಮಾಡಿರಲಿ ಅಥವಾ ಮಾಡಿಲ್ಲದಿರಲಿ) ನಕಲು ಮಾಡಿದ ಪ್ರತಿಯನ್ನು; ಅಥವಾ

(ಬಿ) ದಸ್ತಾವೇಜಿನ ಪಡಿಯಚ್ಚು ಪ್ರತಿಯನ್ನು; ಅಥವಾ

(ಸಿ) (2)ನೇ ಉಪಪ್ರಕರಣದಲ್ಲಿ ಮತ್ತು ಈ ಪ್ರಕರಣದಲ್ಲಿ ಒಳಗೊಂಡಿರುವ ಇತರ ಉಪಬಂಧಗಳಲ್ಲಿ ತಿಳಿಸಿದ ಷರತ್ತುಗಳನ್ನು ಪ್ರಶ್ನಿತ ಹೇಳಿಕೆಗೆ ಮತ್ತು ಕಂಪ್ಯೂಟರ್‌ಗೆ ಸಂಬಂಧಿಸಿದಂತೆ ಪೂರೈಸಿದ್ದರೆ, ದಸ್ತಾವೇಜಿನಲ್ಲಿ ಒಳಗೊಂಡಿರುವ ಮತ್ತು ಕಂಪ್ಯೂಟರ್, ಮ್ಯಾಗ್ನೆಟಿಕ್ ಟೇಪ್ ಅಥವಾ ಮೆಕ್ಯಾನಿಕಲ್ ಅಥವಾ ಎಲೆಕ್ಟ್ರಾನಿಕ್ ದತ್ತಾಂಶವನ್ನು ಮತ್ತೆ ಪಡೆಯುವ ತಾಂತ್ರಿಕತೆಯ ಯಾವುದೇ ಇತರ ರೂಪದಿಂದ ತೆಗೆಯಲಾದ ಮುದ್ರಿತ ವಿಷಯದಲ್ಲಿ (ಇದರಲ್ಲಿ ಇನ್ನು ಮುಂದೆ ಕಂಪ್ಯೂಟರ್ ಪ್ರಿಂಟ್ ಔಟ್ ಎಂದು ಉಲ್ಲೇಖಿಸಲಾಗಿದೆ) ಒಳಗೊಂಡಿರುವ ಒಂದು ಹೇಳಿಕೆಯನ್ನು

- ಸಹ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ವಿನಿಯಮಗಳ ಉದ್ದೇಶಗಳಿಗಾಗಿ ಒಂದು ದಸ್ತಾವೇಜು ಎಂದು ಭಾವಿಸತಕ್ಕದ್ದು ಮತ್ತು ಅದರ ಮೇರೆಗಿನ ಯಾವುದೇ ವ್ಯವಹರಣೆಗಳಲ್ಲಿ, ಹೆಚ್ಚಿನ ರುಜುವಾತು ಇಲ್ಲದೆ ಅಥವಾ ಮೂಲವನ್ನು ಹಾಜರುಪಡಿಸದೆ, ಯಾವ ಮೂಲ ಪ್ರತಿಯ ಒಳಾಂಶಗಳನ್ನು ಅಥವಾ ಅದರಲ್ಲಿ ತಿಳಿಸಿರುವ ಯಾವುದೇ ವಾಸ್ತಾವಾಂಶವನ್ನು ನೇರ ಸಾಕ್ಷ್ಯವಾಗಿ ಅಂಗೀಕರಿಸಬಹುದೋ ಆ ಒಳಾಂಶಗಳ ಅಥವಾ ವಾಸ್ತವಾಂಶದ ಸಾಕ್ಷ್ಯವಾಗಿ ಅದು ಅಂಗೀಕಾರಾರ್ಹವಾಗತಕ್ಕದ್ದು.

(2) ಕಂಪ್ಯೂಟರ್ ಪ್ರಿಂಟ್ ಔಟ್‌ಗೆ ಸಂಬಂಧಿಸಿದಂತೆ (1) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಷರತ್ತುಗಳು ಈ ಕೆಳಕಂಡಂತಿರತಕ್ಕದ್ದು, ಎಂದರೆ:-

(ಎ) ಹೇಳಿಕೆಯನ್ನು ಒಳಗೊಂಡ ಕಂಪ್ಯೂಟರ್ ಪ್ರಿಂಟ್ ಔಟ್, ಕಂಪ್ಯೂಟರ್‌ನ ಬಳಕೆಯ ಮೇಲೆ ಕಾನೂನುಬದ್ಧ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು, ಯಾವ ಅವಧಿಯಲ್ಲಿ ನಿಯತವಾಗಿ ನಿರ್ವಹಿಸಿದ ಯಾವುವೇ ಚಟುವಟಿಕೆಗಳ ಉದ್ದೇಶಗಳಿಗಾಗಿ ಮಾಹಿತಿಯನ್ನು ಶೇಖರಿಸಿಡುವುದಕ್ಕೆ ಅಥವಾ ಸಂಸ್ಕರಿಸುವುದಕ್ಕೆ ಕಂಪ್ಯೂಟರನ್ನು ನಿಯತವಾಗಿ ಬಳಸುತ್ತಿದ್ದನೋ ಆ ಅವಧಿಯಲ್ಲಿ, ಕಂಪ್ಯೂಟರಿನಿಂದ ತೆಗೆದಿದ್ದಾಗಿರತಕ್ಕದ್ದು;

(ಬಿ) ಸದರಿ ಅವಧಿಯಲ್ಲಿ, ಆ ಹೇಳಿಕೆಯಲ್ಲಿ ಒಳಗೊಂಡಿರುವ ಬಗೆಯ ಮಾಹಿತಿಯನ್ನು ಅಥವಾ ಹಾಗೆ ಒಳಗೊಂಡಿರುವ ಮಾಹಿತಿಯನ್ನು ಯಾವ ಬಗೆಯ ಮಾಹಿತಿಯಿಂದ ಪಡೆದುಕೊಳ್ಳಲಾಯಿತೋ ಆ ಬಗೆಯ ಮಾಹಿತಿಯನ್ನು, ಸದರಿ ಕಾರ್ಯಚಟುವಟಿಕೆಗಳ ಸಾಮಾನ್ಯ ಕ್ರಮದಲ್ಲಿ ಕಂಪ್ಯೂಟರಿನಲ್ಲಿ ನಿಯತವಾಗಿ ಶೇಖರಿಸಿಟ್ಟಿರತಕ್ಕದ್ದು;

(ಸಿ) ಸದರಿ ಅವಧಿಯ ಮುಖ್ಯ ಭಾಗದಾದ್ಯಂತ, ಕಂಪ್ಯೂಟರು ಯುಕ್ತವಾಗಿ ಕಾರ್ಯನಿರ್ವಹಿಸಿರತಕ್ಕದ್ದು, ಅಥವಾ ಹಾಗೆ ಕಾರ್ಯನಿರ್ವಹಿಸಿರದಿದ್ದರೆ, ಆ ಅವಧಿಯ ಆ ಭಾಗದಲ್ಲಿ ಅದು ಯಾವ ಬಾಬತ್ತಿನಲ್ಲಿ ಯುಕ್ತವಾಗಿ ಕಾರ್ಯನಿರ್ವಹಿಸಿರಲಿಲ್ಲವೋ ಅಥವಾ ಅದು ಕಾರ್ಯವನ್ನೇ ನಿರ್ವಹಿಸಲಿಲ್ಲವೋ ಆ ಯಾವುದೇ ಬಾಬ್ತು, ದಸ್ತಾವೇಜಿನ ತಯಾರಿಕೆಗೆ ಅಥವಾ ಅದರ ಒಳಾಂಶಗಳ ನಿಖರತೆಗೆ ಬಾಧಕವುಂಟುಮಾಡುವಂಥದ್ದಾಗಿರತಕ್ಕದ್ದಲ್ಲ; ಮತ್ತು

(ಡಿ) ಹೇಳಿಕೆಯಲ್ಲಿ ಒಳಗೊಂಡಿರುವ ಮಾಹಿತಿಯು, ಸದರಿ ಕಾರ್ಯ ಚಟುವಟಿಕೆಗಳ ಸಾಮಾನ್ಯ ಕ್ರಮದಲ್ಲಿ ಕಂಪ್ಯೂಟರಲ್ಲಿ ಸಂಗ್ರಹಿಸಿದ್ದ ಮಾಹಿತಿಯಿಂದ ಮತ್ತೆ ತಯಾರಿಸಿದ್ದಾಗಿರತಕ್ಕದ್ದು ಅಥವಾ ಪಡೆದಿದ್ದಾಗಿರತಕ್ಕದ್ದು.

(3) (2)ನೇ ಉಪಪ್ರಕರಣದ (ಎ) ಖಂಡದಲ್ಲಿ ತಿಳಿಸಿರುವಂತೆ ಯಾವ ಅವಧಿಯಲ್ಲಿ ನಿಯತವಾಗಿ ರ್ವಹಿಸಿದ ಯಾವುದೇ ಕಾರ್ಯಚಟುವಟಿಕೆಗಳ ಉದ್ದೇಶಗಳಿಗಾಗಿ, ಮಾಹಿತಿಯನ್ನು ಶೇಖರಿಸಿಡುವ ಅಥವಾ ಂಸ್ಕರಿಸುವ ಕಾರ್ಯವನ್ನು,–

(ಎ) ಆ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಂಪ್ಯೂಟರ್‌ಗಳ ಸಮುಚ್ಚಯದ ಮೂಲಕವಾಗಿಯಾಗಲಿ; ಅಥವಾ

(ಬಿ) ಆ ಅವಧಿಯಲ್ಲಿ ಒಂದಾದ ಮೇಲೊಂದರಂತೆ ಕಾರ್ಯನಿರ್ವಹಿಸುತ್ತಿದ್ದ ಬೇರೆಬೇರೆ ಕಂಪ್ಯೂಟರ್‌ಗಳ ಮೂಲಕವಾಗಿಯಾಗಲಿ; ಅಥವಾ

(ಸಿ) ಆ ಅವಧಿಯಲ್ಲಿ ಅನುಕ್ರಮವಾಗಿ ಕಾರ್ಯನಿರ್ವಹಿಸುತ್ತಿದ್ದ ಕಂಪ್ಯೂಟರ್‌ಗಳ ಬೇರೆಬೇರೆ ಸಮುಚ್ಚಯಗಳ ಮೂಲಕವಾಗಿಯಾಗಲಿ; ಅಥವಾ

(ಡಿ) ಆ ಅವಧಿಯಲ್ಲಿ ಒಂದು ಅಥವಾ ಹೆಚ್ಚು ಕಂಪ್ಯೂಟರ್‌ಗಳ ಮತ್ತು ಒಂದು ಅಥವಾ ಹೆಚ್ಚು ಕಂಪ್ಯೂಟರ್‌ಗಳ ಸಮುಚ್ಚಯಗಳ ಯಾವುದೇ ರೀತಿಯ ಕ್ರಮದಲ್ಲಿ, ಅನುಕ್ರಮವಾಗಿ ಕಾರ್ಯನಿರ್ವಹಿಸುವುದನ್ನೊಳಗೊಂಡ ಯಾವುದೇ ಇತರ ರೀತಿಯಲ್ಲಾಗಲಿ, ಆ ಅವಧಿಯಲ್ಲಿ ಕಂಪ್ಯೂಟರ್‌ಗಳ ಮೂಲಕ ನಿಯತವಾಗಿ ನಿರ್ವಹಿಸಿರುವಲ್ಲಿ, ಆ ಅವಧಿಯಲ್ಲಿ ಆ ಉದ್ದೇಶಕ್ಕಾಗಿ ಬಳಸಿದ ಎಲ್ಲಾ ಕಂಪ್ಯೂಟರ್‌ಗಳನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ಒಂದೇ ಕಂಪ್ಯೂಟರ್ ಎಂದು ಪರಿಗಣಿಸತಕ್ಕದ್ದು; ಮತ್ತು ಈ ಪ್ರಕರಣದಲ್ಲಿ ಕಂಪ್ಯೂಟರ್‌ಗೆ ಮಾಡಿದ ಉಲ್ಲೇಖಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(4) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ವಿನಿಯಮಗಳ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ಈ ಪ್ರಕರಣದ ಕಾರಣದಿಂದಾಗಿ ಸಾಕ್ಷ್ಯದಲ್ಲಿ ಹೇಳಿಕೆ ನೀಡಲು ಇಚ್ಛಿಸಿದಲ್ಲಿ, ಈ ಕೆಳಕಂಡ ಯಾವುವೇ ಕಾರ್ಯಗಳನ್ನು ಮಾಡುವ, ಎಂದರೆ:-

(ಎ) ಹೇಳಿಕೆಯನ್ನು ಒಳಗೊಂಡ ದಸ್ತಾವೇಜನ್ನು ಗುರುತಿಸುವ ಮತ್ತು ಅದನ್ನು ತಯಾರಿಸಿದ ರೀತಿಯನ್ನು ವಿವರಿಸುವ;

(ಬಿ) ಆ ದಸ್ತಾವೇಜನ್ನು ಕಂಪ್ಯೂಟರ್ ಮೂಲಕ ತಯಾರಿಸಲಾಗಿದೆ ಎಂಬುದನ್ನು ತೋರಿಸುವ ಉದ್ದೇಶಕ್ಕಾಗಿ ಯುಕ್ತವೆನಿಸಬಹುದಾದಂತೆ ಆ ದಸ್ತಾವೇಜಿನ ತಯಾರಿಕೆಯಲ್ಲಿ ಒಳಗೊಂಡಿರುವ ಯಾವುದೇ ಸಾಧನದ ಅಂಥ ವಿವರಗಳನ್ನು ನೀಡುವ;

(ಸಿ) (2)ನೇ ಉಪಪ್ರಕರಣದಲ್ಲಿ ತಿಳಿಸಿದ ಷರತ್ತುಗಳು ಯಾವ ವಿಷಯಗಳಿಗೆ ಸಂಬಂಧಪಡುತ್ತವೋ ಮತ್ತು ಸಂಬಂಧಪಟ್ಟ ಸಾಧನದ ಕಾರ್ಯ ನಿರ್ವಹಣೆಗೆ ಅಥವಾ ಸಂಬಂಧಪಟ್ಟ ಕಾರ್ಯ ಚಟುವಟಿಕೆಗಳ ವ್ಯವಸ್ಥಾಪನೆಗೆ (ಯಾವುದು ಯುಕ್ತವಾದದ್ದೋ ಅದು) ಸಂಬಂಧಿಸಿದಂತೆ ಬ್ಯಾಂಕ್‌ನಲ್ಲಿ ಜವಾಬ್ದಾರಿಯುತವಾದ ಅಧಿಕೃತ ಸ್ಥಾನವನ್ನು ಹೊಂದಿರುವ ವ್ಯಕ್ತಿಯು ಸಹಿ ಮಾಡಿರುವನೆಂದು ತಾತ್ಪರ್ಯವಾಗುವುದೋ ಆ ಯಾವುವೇ ವಿಷಯಗಳ ಬಗ್ಗೆ ವ್ಯವಹರಿಸುವ

- ಕುರಿತ ಪ್ರಮಾಣಪತ್ರವು, ಆ ಪ್ರಮಾಣಪತ್ರದಲ್ಲಿ ತಿಳಿಸಿದ ಯಾವುದೇ ವಿಷಯದ ಸಾಕ್ಷ್ಯವಾಗಿರತಕ್ಕದ್ದು; ಮತ್ತು ಈ ಉಪ ಪ್ರಕರಣದ ಉದ್ದೇಶಗಳಿಗಾಗಿ, ಅದನ್ನು ತಿಳಿಸಿದ ವ್ಯಕ್ತಿಯು ತಿಳಿದಿರುವಷ್ಟರ ಮಟ್ಟಿಗೆ ಹಾಗೂ ನಂಬಿರುವಷ್ಟರ ಮಟ್ಟಿಗೆ ಆತನು ತಿಳಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಅದು ಸಾಕಷ್ಟಾದುದಾಗಿರತಕ್ಕದ್ದು.

(5) ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ಯಾವುದೇ ಯುಕ್ತ ರೀತಿಯಲ್ಲಿ ಮಾಹಿತಿಯನ್ನು ಕಂಪ್ಯೂಟರ್‌ಗೆ ತುಂಬಿದ್ದರೆ ಮತ್ತು ಅದನ್ನು ನೇರವಾಗಿ ಹಾಗೆ ತುಂಬಿರಲಿ ಅಥವಾ ಯಾವುದೇ ಯುಕ್ತ ಸಾಧನ ಸಾಮಗ್ರಿಯ ಮೂಲಕ ಹಾಗೆ ತುಂಬಿರಲಿ, (ಮನುಷ್ಯನ ನೆರವಿನಿಂದ ಅಥವಾ ನೆರವಿಲ್ಲದೆ) ಕಂಪ್ಯೂಟರ್‌ಗೆ ಮಾಹಿತಿಯನ್ನು ತುಂಬಿರುವುದಾಗಿ ಪರಿಗಣಿಸತಕ್ಕದ್ದು;

(ಬಿ) ಯಾರೇ ನೌಕರನು ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವಾಗ ಆ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವಾಗ ಹೊರತು ಅನ್ಯಥಾ ನಿರ್ವಹಿಸಿದ ಕಂಪ್ಯೂಟರ್‌ನ ಮೂಲಕ ಆ ಕಾರ್ಯಚಟುವಟಿಕೆಗಳ ಉದ್ದೇಶಗಳಿಗಾಗಿ, ಮಾಹಿತಿಯನ್ನು ಶೇಖರಿಸಿಡುವ ಅಥವಾ ಸಂಸ್ಕರಿಸುವ ದೃಷ್ಟಿಯಿಂದ ಮಾಹಿತಿಯನ್ನು ತುಂಬಿದಲ್ಲಿ ಆ ಕಂಪ್ಯೂಟರ್‌ಗೆ ಆ ಮಾಹಿತಿಯನ್ನು ಯುಕ್ತವಾಗಿ ತುಂಬಿದ್ದರೆ ಅದನ್ನು ಆ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವಾಗಲೇ ಅದಕ್ಕೆ ತುಂಬಿರುವುದಾಗಿ ಪರಿಗಣಿಸತಕ್ಕದ್ದು;

(ಸಿ) ಒಂದು ದಸ್ತಾವೇಜನ್ನು ಕಂಪ್ಯೂಟರ್‌ನಿಂದ ನೇರವಾಗಿ ತಯಾರಿಸಿರಲಿ ಅಥವಾ (ಮನುಷ್ಯನ ನೆರವಿನಿಂದ ಅಥವಾ ನೆರವಿಲ್ಲದೆ) ಯಾವುದೇ ಯುಕ್ತ ಸಾಧನ ಸಾಮಗ್ರಿಯ ಮೂಲಕ ತಯಾರಿಸಿರಲಿ, ಆ ದಸ್ತಾವೇಜನ್ನು ಆ ಕಂಪ್ಯೂಟರ್‌ನಿಂದ ತಯಾರಿಸಲಾಗಿದೆಯೆಂದು ಪರಿಗಣಿಸತಕ್ಕದ್ದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪ್ಯೂಟರ್" ಎಂದರೆ, ಎಲೆಕ್ಟ್ರಾನಿಕ್, ಮ್ಯಾಗ್ನೆಟಿಕ್ ಅಥವಾ ಆಪ್ಟಿಕಲ್ ಚಾಲಕ ಶಕ್ತಿಗಳ ಕುಶಲ ಬಳಕೆಯ ಮೂಲಕ ತಾರ್ಕಿಕವಾದ, ಅಂಕಗಣಿತೀಯ ಮತ್ತು ಸ್ಮರಣ ಶಕ್ತಿಯ ಕಾರ್ಯಗಳನ್ನು ನಿರ್ವಹಿಸುವ ಯಾವುದೇ ಎಲೆಕ್ಟ್ರಾನಿಕ್, ಮ್ಯಾಗ್ನೆಟಿಕ್, ಆಪ್ಟಿಕಲ್ ಅಥವಾ ಇತರ ಹೈಸ್ಪೀಡ್ ದತ್ತಾಂಶ ಸಂಸ್ಕರಣ ಸೇವಾ ಸಾಧನ ಅಥವಾ ಸಿಸ್ಟಂ ಮತ್ತು ಕಂಪ್ಯೂಟರ್ ಸಿಸ್ಟಂನಲ್ಲಿ ಅಥವಾ ಕಂಪ್ಯೂಟರ್ ಜಾಲದಲ್ಲಿ ಕಂಪ್ಯೂಟರ್‌ಗೆ ಸಂಪರ್ಕ ಕಲ್ಪಿಸಿದ ಅಥವಾ ಸಂಬಂಧಿಸಿದ ಎಲ್ಲಾ ಇನ್‌ಪುಟ್, ಔಟ್‌ಪುಟ್, ಸಂಸ್ಕರಣೆ, ಸಂಗ್ರಹ, ಕಂಪ್ಯೂಟರ್ ತಂತ್ರಾಂಶ ಅಥವಾ ಸಂವಹನ ಸೌಲಭ್ಯಗಳು ಅದರಲ್ಲಿ ಒಳಗೊಳ್ಳುತ್ತವೆ;

(ಬಿ) "ಕಂಪ್ಯೂಟರ್ ಪ್ರಿಂಟ್ ಔಟ್" ಎಂಬುದರಲ್ಲಿ, ಬ್ಯಾಂಕಿನ ಅಥವಾ ಏಜೆಂಟ್‌ನ ವ್ಯವಹಾರವನ್ನು ವಾಡಿಕೆಯಂತೆ ನಿರ್ವಹಿಸುವಾಗ, ಕಂಪ್ಯೂಟರ್‌ನಲ್ಲಿ ಶೇಖರಿಸಿಟ್ಟಿದ್ದ ಮಾಹಿತಿಯಿಂದ ಕಾಗದದ ಮೇಲೆ ಮುದ್ರಿಸಿದ ಅಥವಾ ಅಂಥ ಮಾಹಿತಿಯಿಂದ ಪಡೆದ ಲೆಡ್ಜರ್‌ಗಳು, ಡೇ–ಬುಕ್‌ಗಳು, ಲೆಕ್ಕ ಪುಸ್ತಕಗಳು ಮತ್ತು ಇತರ ದಾಖಲೆಗಳು ಒಳಗೊಳ್ಳುತ್ತವೆ; ಮತ್ತು

(ಸಿ) ಇತರ ಮಾಹಿತಿಯಿಂದ ಪಡೆಯಲಾಗುವ ಮಾಹಿತಿಗೆ ಮಾಡಿದ ಯಾವುದೇ ಉಲ್ಲೇಖವು, ಲೆಕ್ಕಾಚಾರದ ಮೂಲಕ, ಹೋಲಿಕೆಯ ಮೂಲಕ ಅಥವಾ ಯಾವುದೇ ಇತರ ಪ್ರಕ್ರಿಯೆ ಮೂಲಕ ಅದರಿಂದ ಪಡೆಯಲಾಗುವ ಮಾಹಿತಿಗೆ ಮಾಡಿದ ಉಲ್ಲೇಖವಾಗಿರತಕ್ಕದ್ದು.

**26. ಬ್ಯಾಂಕ್ ಮತ್ತು ಅದರ ಅಧಿಕಾರಿಗಳು ಸರ್ಕಾರಿ ಅಧಿಕಾರಿಗಳಾಗಿರುವುದು.**– ಭಾರತ ಸಾಕ್ಷ್ಯ ಅಧಿನಿಯಮ, 1872ರ 124ನೇ ಪ್ರಕರಣದ, ಸರ್ಕಾರಿ ಅಧಿಕಾರಿಗಳು ತಮ್ಮ ಪದೀಯ ಸಾಮರ್ಥ್ಯದಲ್ಲಿ ಹೂಡಿದ ಅಥವಾ ಅವರ ವಿರುದ್ಧ ಹೂಡಲಾದ ದಾವೆಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಭಾಗ–IV ರ ಉಪಬಂಧಗಳ ಮತ್ತು ಸದರಿ ಸಂಹಿತೆಯ ಕ್ರಮಾದೇಶ Vರ 27ನೇ ನಿಯಮದ ಹಾಗೂ ಕ್ರಮಾದೇಶ XXI ರ 52ನೇ ನಿಯಮದ ಉಪಬಂಧಗಳ ಉದ್ದೇಶಗಳಿಗಾಗಿ, ಬ್ಯಾಂಕ್‌ನ್ನು ಮತ್ತು ಬ್ಯಾಂಕಿನ ಅಧಿಕಾರಿಯಾಗಿ ತನ್ನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕಿನ ಯಾರೇ ಅಧಿಕಾರಿಯನ್ನು ಸರ್ಕಾರಿ ಅಧಿಕಾರಿಯೆಂದು ಭಾವಿಸತಕ್ಕದ್ದು.

**27. ಪೂರಕ ಸಾಮಾನ್ಯ ಲೆಡ್ಜರ್ ಖಾತೆ ಸೌಲಭ್ಯದ ದುರ್ಬಳಕೆ.**– 4ನೇ ಪ್ರಕರಣದ ನಿಬಂಧನೆಗಳಿಗೆ ಅನುಸಾರವಾಗಿ ಬ್ಯಾಂಕ್ ಯಾರೇ ಸರ್ಕಾರಿ ಭದ್ರತಾ ಪತ್ರದ ಧಾರಕನ ಹೆಸರಿನಲ್ಲಿ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯನ್ನು ತೆರೆದಿರುವಲ್ಲಿ, ಮತ್ತು,–

(ಎ) ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಆ ಖಾತೆಯನ್ನು ತೆರೆಯಲಾಗಿತ್ತೋ ಆ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ವಿರುದ್ಧವಾಗಿ ಸದರಿ ಖಾತೆಯನ್ನು ನಿರ್ವಹಿಸುತ್ತಿರುವುದು ಎಂದು ಬ್ಯಾಂಕಿನ ಗಮನಕ್ಕೆ ಬಂದಲ್ಲಿ; ಅಥವಾ

(ಬಿ) ಪೂರಕ ಸಾಮಾನ್ಯ ಲೆಡ್ಜರ್ ಖಾತೆಯ ವರ್ಗಾವಣೆ ನಮೂನೆಯು, ಸರ್ಕಾರಿ ಭದ್ರತಾ ಪತ್ರವು ಅಥವಾ ನಿಧಿಗಳು ಸಾಕಷ್ಟಿಲ್ಲದಿರುವುದರಿಂದಾಗಿ ಪಾವತಿಯಾಗದೆ ವಾಪಸಾಗಿರುವಲ್ಲಿ; ಅಥವಾ

(ಸಿ) ಬ್ಯಾಂಕಿಂಗ್ ಪದ್ಧತಿಗೆ ವಿರುದ್ಧವಾಗಿ ಅಥವಾ ಸಾಮಾನ್ಯವಾಗಿ ಸರ್ಕಾರಿ ಭದ್ರತಾ ಪತ್ರಗಳ ಧಾರಕರ ಹಿತಾಸಕ್ತಿಗಳಿಗೆ ಬಾಧಕವಾಗುವ ರೀತಿಯಲ್ಲಿ ಖಾತೆಯನ್ನು ನಿರ್ವಹಿಸಲಾಗುತ್ತಿದೆಯೆಂದು ಬ್ಯಾಂಕ್ ಅಭಿಪ್ರಾಯಪಟ್ಟಲ್ಲಿ; ಅಥವಾ

(ಡಿ) ಪೂರಕ ಸಾಮಾನ್ಯ ಲೆಡ್ಜರ್ ಖಾತೆಯನ್ನು ಯಾವುದೇ ರೀತಿಯಲ್ಲಿ ದುರ್ಬಳಕೆ ಮಾಡುತ್ತಿದ್ದಲ್ಲಿ,

ಬ್ಯಾಂಕು, ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಲಿಖಿತ ಆದೇಶದ ಮೂಲಕ, ಅಂಥ ಖಾತೆಯ ಧಾರಕನನ್ನು, ತಾನು ಯುಕ್ತವೆಂದು ಭಾವಿಸುವಂತೆ, ಪೂರಕ ಸಾಮಾನ್ಯ ಲೆಡ್ಜರ್ ಖಾತೆಯ ಸೌಲಭ್ಯದೊಂದಿಗೆ ವ್ಯವಹರಿಸುವುದರಿಂದ ತಾತ್ಕಾಲಿಕವಾಗಿ ಅಥವಾ ಖಾಯಂ ಆಗಿ ಅನರ್ಹಗೊಳಿಸಬಹುದು.

**28. ಒತ್ತೆ, ಅಡವು ಅಥವಾ ಧಾರಣಾಧಿಕಾರ.–** (1) ನಿಯಮಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಸರ್ಕಾರಿ ಭದ್ರತಾ ಪತ್ರದ ಧಾರಕನು ಅಂಥ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಒತ್ತೆ ಅಥವಾ ಅಡವು ಅಥವಾ ಧಾರಣಾಧಿಕಾರವನ್ನು ಸೃಜಿಸಬಹುದು.

(2) ಸರ್ಕಾರಿ ಭದ್ರತಾ ಪತ್ರದ ಧಾರಕನಿಂದ ಒತ್ತೆ ಅಥವಾ ಅಡವು ಅಥವಾ ಧಾರಣಾಧಿಕಾರದ ನೋಟೀಸನ್ನು ಸ್ವೀಕರಿಸಿದ ಮೇಲೆ, ಅಂಥ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಖಾತೆಯನ್ನು ನಿರ್ವಹಿಸುತ್ತಿರುವ ಬ್ಯಾಂಕು ಅಥವಾ ಯಾರೇ ಏಜೆಂಟನು ತನ್ನ ದಾಖಲೆಯಲ್ಲಿ ಅಗತ್ಯ ನಮೂದು ಮಾಡತಕ್ಕದ್ದು ಮತ್ತು ಅಂಥ ನಮೂದು, ಸಂದರ್ಭಾನುಸಾರ, ಅದರ ಒತ್ತೆಯ, ಅಡವಿನ ಅಥವಾ ಧಾರಣಾಧಿಕಾರದ ಸಾಕ್ಷ್ಯವಾಗಿರತಕ್ಕದ್ದು.

**29. ಮಾಹಿತಿ ತರಿಸಿಕೊಳ್ಳುವ, ತನಿಖೆ ಮಾಡಿಸುವ ಮತ್ತು ನಿರ್ದೇಶನಗಳನ್ನು ನೀಡುವ ಅಧಿಕಾರ.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ಬ್ಯಾಂಕು, ಯಾವುದೇ ಕಾಲದಲ್ಲಿ, ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ, ಯಾರೇ ಏಜೆಂಟನಿಂದ ಅಥವಾ ಗ್ರಾಹಕರ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯೂ ಸೇರಿದಂತೆ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯ ಧಾರಕನಿಂದ ಅಗತ್ಯವೆಂದು ತಾನು ಭಾವಿಸುವಂಥ ಮಾಹಿತಿಯನ್ನು ತರಿಸಿಕೊಳ್ಳಬಹುದು ಮತ್ತು ತನ್ನ ಒಬ್ಬ ಅಥವಾ ಹೆಚ್ಚಿನ ಅಧಿಕಾರಿಗಳಿಂದ ಅಥವಾ ಇತರ ವ್ಯಕ್ತಿಗಳಿಂದ ಯಾರೇ ಏಜೆಂಟನನ್ನು ಅಥವಾ ಗ್ರಾಹಕರ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯೂ ಸೇರಿದಂತೆ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯ ಧಾರಕನನ್ನು ತನಿಖೆ ಅಥವಾ ಪರಿಶೀಲನೆ ಮಾಡಿಸಬಹುದು.

(2) ಬ್ಯಾಂಕು, ಈ ಅಧಿನಿಯಮದ ಉದ್ದೇಶಗಳ ಈಡೇರಿಕೆಗಾಗಿ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ,–

(i) ಗ್ರಾಹಕರ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯೂ ಸೇರಿದಂತೆ ಪೂರಕ ಸಾಮಾನ್ಯ ಲೆಡ್ಜರ್ ಖಾತೆಗಳ ಧಾರಕರಿಗೆ;

(ii) ಬಾಂಡ್ ಲೆಡ್ಜರ್ ಖಾತೆಯನ್ನು ನಿರ್ವಹಿಸುತ್ತಿರುವ ಏಜೆಂಟರುಗಳಿಗೆ; ಮತ್ತು

(iii) ಸರ್ಕಾರಿ ಭದ್ರತಾ ಪತ್ರಗಳ ಬಗ್ಗೆ ವ್ಯವಹರಿಸುವ ಯಾರೇ ಇತರ ವ್ಯಕ್ತಿಗೆ

- ಅದು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ನೀಡುವುದು ಅವಶ್ಯವೆಂದು ಪರಿಗಣಿಸಿದರೆ ಅದು ಹಾಗೆ ಮಾಡುವುದು.

**30. ಉಲ್ಲಂಘನೆ ಮತ್ತು ದಂಡನೆಗಳು.-** (1) ಯಾರೇ ವ್ಯಕ್ತಿಯು, ತನಗಾಗಿ ಅಥವಾ ಯಾರೇ ಇತರ ವ್ಯಕ್ತಿಗಾಗಿ ಸರ್ಕಾರಿ ಭದ್ರತಾ ಪತ್ರದ ಯಾವುದೇ ಸ್ವಾಮ್ಯವನ್ನು ಪಡೆಯುವ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ಸಲ್ಲಿಸಿದ ಯಾವುದೇ ಅರ್ಜಿಯಲ್ಲಿ ಅಥವಾ ಈ ಅಧಿನಿಯಮದ ಅನುಸಾರ ನಡೆಸಿದ ಯಾವುದೇ ವಿಚಾರಣೆಯ ಸಂದರ್ಭದಲ್ಲಿ ಯಾವುದೇ ಪ್ರಾಧಿಕಾರಕ್ಕೆ ಯಾವುದೇ ಸುಳ್ಳು ಹೇಳಿಕೆಯನ್ನು ಮತ್ತು ಅವನು ಸುಳ್ಳೆಂದು ತಿಳಿದಿರುವ ಅಥವಾ ಸತ್ಯವೆಂದು ನಂಬದಿರುವ ಯಾವುದೇ ಹೇಳಿಕೆಯನ್ನು ನೀಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾವುದೇ ನ್ಯಾಯಾಲಯವು, ಬ್ಯಾಂಕು ಸಲ್ಲಿಸಿದ ದೂರಿನ ಮೇಲೆ ಹೊರತು (1)ನೇ ಉಪ ಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(3) ಕೈಗೊಳ್ಳುವುದು ಸೂಕ್ತವೆಂದು ಬ್ಯಾಂಕು ಭಾವಿಸಬಹುದಾದಂಥ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ, ಬ್ಯಾಂಕು, ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ನೀಡಿದ ತರುವಾಯ, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಅಥವಾ ಈ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ವಿನಿಯಮನ, ಅಧಿಸೂಚನೆ ಅಥವಾ ನೀಡಿದ ನಿರ್ದೇಶನವನ್ನು ಉಲ್ಲಂಘಿಸುವ ಅಥವಾ ಗ್ರಾಹಕರ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯೂ ಸೇರಿದಂತೆ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯನ್ನು ತೆರೆಯುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಗೆ, ಐದು ಲಕ್ಷ ರೂಪಾಯಿಗಳಿಗೆ ಮೀರದಂತೆ ದಂಡವನ್ನು ಮತ್ತು ಅಂಥ ಉಲ್ಲಂಘನೆ ಮುಂದುವರಿದಲ್ಲಿ, ಆ ಉಲ್ಲಂಘನೆ ಮುಂದುವರಿದ ಅವಧಿಯ ಮೊದಲನೇ ದಿನದ ನಂತರ ಪ್ರತಿ ದಿನಕ್ಕೆ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ದಂಡವನ್ನು ವಿಧಿಸಬಹುದು.

**31. ಕೆಲವು ಕಾನೂನುಗಳು ಸರ್ಕಾರಿ ಭದ್ರತಾ ಪತ್ರಗಳಿಗೆ ಅನ್ವಯವಾಗದಿರುವುದು.-** (1) ಸಾರ್ವಜನಿಕ ಋಣ ಅಧಿನಿಯಮ, 1944 (1944ರ 18) ಯಾವ ಸರ್ಕಾರಿ ಭದ್ರತಾ ಪತ್ರಗಳಿಗೆ ಅನ್ವಯವಾಗುವುದೋ ಆ ಸರ್ಕಾರಿ ಭದ್ರತಾ ಪತ್ರಗಳಿಗೆ ಮತ್ತು ಈ ಅಧಿನಿಯಮದ ಮೂಲಕ ಯಾವ ವಿಷಯಗಳಿಗೆ ಉಪಬಂಧಗಳನ್ನು ಕಲ್ಪಿಸಲಾಗಿದೆಯೋ ಆ ಎಲ್ಲ ವಿಷಯಗಳಿಗೆ ಈ ಅಧಿನಿಯಮವು ಅನ್ವಯವಾಗುವುದು ನಿಂತು ಹೋಗತಕ್ಕದ್ದು.

(2) ಅಂಥ ನಿಂತು ಹೋಗುವಿಕೆ ಏನೇ ಇದ್ದರೂ, ಆ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಿ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮವು ಎಲ್ಲಾ ಸಂಬಂಧಿತ ಕಾಲಗಳಲ್ಲಿ ಜಾರಿಯಲ್ಲಿದ್ದಿದ್ದರೆ ಹೋಗೋ ಹಾಗೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಿದ್ದೆಂದು ಅಥವಾ ಕೈಗೊಂಡದ್ದೆಂದು ಭಾವಿಸತಕ್ಕದ್ದು.

(3) ಠೇವಣಿ ಆಗಾರಗಳ ಅಧಿನಿಯಮ, 1996 ರಲ್ಲಿ ಅಥವಾ ಅದರ ಮೇರೆಗೆ ರಚಿಸಿದ ವಿನಿಯಮಗಳಲ್ಲಿ ಇರುವುದು ಯಾವುದೂ, ಠೇವಣಿ ಆಗಾರಗಳ ಅಧಿನಿಯಮ, 1996ರ ಮೇರೆಗೆ ಯಾವುದೇ ಠೇವಣಿ ಆಗಾರವು,

ಸಂದರ್ಭಾನುಸಾರ, ಸರ್ಕಾರದೊಂದಿಗೆ ಅಥವಾ ಬ್ಯಾಂಕಿನೊಂದಿಗೆ ಒಪ್ಪಂದವನ್ನು ತದ್ವಿರುದ್ಧವಾಗಿ ಮಾಡಿಕೊಂಡ ಹೊರತು, ಈ ಅಧಿನಿಯಮದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಭದ್ರತಾ ಪತ್ರಗಳಿಗೆ ಅನ್ವಯವಾಗತಕ್ಕದ್ದಲ್ಲ.

**32. ವಿನಿಯಮಗಳನ್ನು ರಚಿಸಲು ಅಧಿಕಾರ.**- (1) ಬ್ಯಾಂಕು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕೆ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾವ ನಿಬಂಧನೆಗಳು ಹಾಗೂ ಷರತ್ತುಗಳಿಗೆ ಒಳಪಟ್ಟು ಸರ್ಕಾರಿ ಭದ್ರತಾ ಪತ್ರಗಳನ್ನು ನೀಡಬಹುದೋ ಆ ನಮೂನೆ ಮತ್ತು ಆ ನಿಬಂಧನೆಗಳು ಹಾಗೂ ಷರತ್ತುಗಳು;

(ಬಿ) 4ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ, ಬ್ಯಾಂಕು, ಗ್ರಾಹಕರ ಪೂರಕ ಸಾಮಾನ್ಯ ಲೆಡ್ಜರ್ ಖಾತೆ ಮತ್ತು ಬಾಂಡ್ ಲೆಡ್ಜರ್ ಖಾತೆಯೂ ಸೇರಿದಂತೆ ಪೂರಕ ಸಾಮಾನ್ಯ ಲೆಡ್ಜರ್ ಖಾತೆಯನ್ನು ತೆರೆಯುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಸಂಬಂಧಿಸಿದ ನಮೂನೆ ಹಾಗೂ ವಿಧಿಸಬೇಕಾದ ಶುಲ್ಕ;

(ಸಿ) 5ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸರ್ಕಾರಿ ಭದ್ರತಾ ಪತ್ರಗಳನ್ನು ವರ್ಗಾಯಿಸತಕ್ಕ ನಮೂನೆ ಮತ್ತು ರೀತಿ ಹಾಗೂ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದ ಯಾವುದೇ ದಸ್ತಾವೇಜನ್ನು ಅಥವಾ ಪ್ರಾಮಿಸರಿ ನೋಟಿನ ಮೇಲಿನ ಹಿಂಬರಹವನ್ನು ಆ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಬರೆದುಕೊಡಲು ಅಸಮರ್ಥನಾಗಿರುವ ವ್ಯಕ್ತಿಯ ಪರವಾಗಿ ಬರೆದುಕೊಡಬಹುದಾದ ರೀತಿ;

(ಡಿ) 7ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಮೃತ ಏಕೈಕ ಧಾರಕನ ಅಥವಾ ಎಲ್ಲಾ ಮೃತ ಜಂಟಿ ಧಾರಕರ ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯಕ್ಕೆ ಮನ್ನಣೆ ನೀಡುವುದಕ್ಕಾಗಿ ಹಾಜರುಪಡಿಸಬೇಕಾದ ದಸ್ತಾವೇಜುಗಳು ಮತ್ತು ಯಾವ ರೀತಿಯಲ್ಲಿ ಹಾಗೂ ಯಾವ ಷರತ್ತುಗಳಿಗೆ ಒಳಪಟ್ಟು ಬ್ಯಾಂಕು, ಆ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯಕ್ಕೆ ಮನ್ನಣೆ ನೀಡಬಹುದೋ ಆ ರೀತಿ ಮತ್ತು ಆ ಷರತ್ತುಗಳು;

(ಇ) 9ನೇ ಪ್ರಕರಣದ ಮೇರೆಗೆ ನಾಮ ನಿರ್ದೇಶನವನ್ನು ಮಾಡಬಹುದಾದ, ವ್ಯತ್ಯಸ್ತಗೊಳಿಸಬಹುದಾದ ಅಥವಾ ರದ್ದು ಪಡಿಸಬಹುದಾದ ನಮೂನೆ ಮತ್ತು ರೀತಿ ಹಾಗೂ ನಾಮ ನಿರ್ದೇಶಿತನು ಅಪ್ರಾಪ್ತ ವಯಸ್ಕನಾಗಿರುವ ಅವಧಿಯಲ್ಲಿ, ಸರ್ಕಾರಿ ಭದ್ರತಾ ಪತ್ರದ ಧಾರಕನು ಅಥವಾ ಜಂಟಿ ಧಾರಕರು ಮರಣ ಹೊಂದಿದ ಸಂದರ್ಭದಲ್ಲಿ, ಸರ್ಕಾರಿ ಭದ್ರತಾ ಪತ್ರವು ಯಾವ ವ್ಯಕ್ತಿಯಲ್ಲಿ ನಿಹಿತವಾಗಬೇಕೆಂದು ಭಾವಿಸುತ್ತಾರೋ ಆ ಯಾರೇ ವ್ಯಕ್ತಿಯನ್ನು ನೇಮಕ ಮಾಡಬಹುದಾದ ರೀತಿ;

(ಎಫ್) 11ನೇ ಪ್ರಕರಣದ ಮೇರೆಗೆ ಸರ್ಕಾರಿ ಭದ್ರತಾ ಪತ್ರಗಳ ದ್ವಿಪ್ರತಿಯನ್ನು ನೀಡುವುದಕ್ಕೆ ಅನ್ವಯವಾಗುವ ಷರತ್ತುಗಳು ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಫೀಜು;

(ಜಿ) 12ನೇ ಪ್ರಕರಣದ ಮೇರೆಗೆ ಬ್ಯಾಂಕು ಸರ್ಕಾರಿ ಭದ್ರತಾ ಪತ್ರದ ಸ್ವಾಮ್ಯವನ್ನು ನಿರ್ಧರಿಸಬಹುದಾದ ರೀತಿ;

(ಹೆಚ್) 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಬಾಂಡಿನ ನಮೂನೆ;

(ಐ) 17ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನಿಹಿತಗೊಳಿಸುವ ಆದೇಶವನ್ನು ಮಾಡುವ ಕಾರ್ಯ ವಿಧಾನ;

(ಜೆ) 24ನೇ ಪ್ರಕರಣದ ಮೇರೆಗೆ ಯಾವ ಸನ್ನಿವೇಶಗಳಲ್ಲಿ ಮತ್ತು ಯಾವ ರೀತಿಯಲ್ಲಿ ಹಾಗೂ ಯಾವ ಷರತ್ತುಗಳಿಗೆ ಒಳಪಟ್ಟು, ಸರ್ಕಾರಿ ಭದ್ರತಾ ಪತ್ರಗಳನ್ನು, ಪುಸ್ತಕಗಳನ್ನು, ರಿಜಿಸ್ಟರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಪರಿಶೀಲಿಸಲು ಅವಕಾಶ ನೀಡಬಹುದೋ ಅಥವಾ ಅವುಗಳಿಂದ ಪಡೆದ ಮಾಹಿತಿಯನ್ನು ನೀಡಬಹುದೋ, ಆ ಸನ್ನಿವೇಶಗಳು ಮತ್ತು ಆ ರೀತಿ ಹಾಗೂ ಆ ಷರತ್ತುಗಳು;

(ಕೆ) 28ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಒತ್ತೆಯನ್ನು ಅಥವಾ ಅಡವನ್ನು ಅಥವಾ ಧಾರಣಾಧಿಕಾರವನ್ನು ಸೃಜಿಸಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು.

(3) ಈ ಅಧಿನಿಯಮದ ಮೇರೆಗೆ ಬ್ಯಾಂಕು ರಚಿಸಿದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ಆ ವಿನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**33. ಜಮ್ಮು ಮತ್ತು ಕಾಶ್ಮೀರದಲ್ಲಿ ಜಾರಿಯಲ್ಲಿಲ್ಲದ ಕಾನೂನುಗಳಿಗೆ ಮಾಡಿದ ಉಲ್ಲೇಖಗಳ ಅರ್ಥಾನ್ವಯ.–** ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವು, ಅಗತ್ಯವಿರುವಲ್ಲೆಲ್ಲಾ, ಆ ರಾಜ್ಯದಲ್ಲಿ ಸಂವಾದಿ ಕಾನೂನು ಯಾವುದಾದರೂ ಜಾರಿಯಲ್ಲಿದ್ದರೆ, ಆ ಸಂವಾದಿ ಕಾನೂನಿಗೆ ಮಾಡಿದ ಉಲ್ಲೇಖವನ್ನೂ ಒಳಗೊಳ್ಳುತ್ತದೆಯೆಂದು ಅರ್ಥೈಸತಕ್ಕದ್ದು.

**34. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ತೊಂದರೆಯನ್ನು ನಿವಾರಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿ ಮುಕ್ತಾಯಗೊಂಡ ನಂತರ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**35. ನಿರಸನ ಮತ್ತು ಉಳಿಸುವಿಕೆ.–** (1) ಭಾರತ ಭದ್ರತಾ ಪತ್ರಗಳ ಅಧಿನಿಯಮ, 1920ನ್ನು (1920ರ 10) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಆ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಿ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಅಂಥ ಕಾರ್ಯವನ್ನು ಮಾಡಿದ ಅಥವಾ ಕ್ರಮವನ್ನು ಕೈಗೊಂಡ ದಿನದಂದು ಈ ಅಧಿನಿಯಮವು ಜಾರಿಯಲ್ಲಿದ್ದಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

* * * * *